# ಅಧ್ಯಾತ್ಮ ಮತ್ತು ಮಾಧ್ಯಮ

ಮಾನವ ಜೀವನದ ಪರಮೋಚ್ಚ ಗತಿಯನ್ನು ನಿರ್ದೇಶಿಸುವುದು 'ಅಧ್ಯಾತ್ಮ'. ಆಧ್ಯಾತ್ಮಿಕತೆಯ ಬೆಳಕಿನಲ್ಲಿ ನಡೆಸುವ ಬಾಳು ಪರಿಪೂರ್ಣ ಬಾಳು. ಜೀವನೋಪಯೋಗಿ ಮಾಹಿತಿಗಳನ್ನು 'ಮಾಧ್ಯಮ' ವು ಜನರಿಗೆ ತಲುಪಿಸಬೇಕು. ಹೀಗಾಗಿ ಉನ್ನತ ಮೌಲ್ಯಯುತ ಜೀವನವನ್ನು ನಡೆಸಲು ಅನುಕೂಲ ಮಾಡಿಕೊಡುವಂತಹ ಆಧ್ಯಾತ್ಮಿಕ ವಿಚಾರಗಳನ್ನು ಕೊಡುವುದೂ ಮಾಧ್ಯಮಗಳ ಕರ್ತವ್ಯ. ಇದು ಇಂದಿನ ಪರಿಸ್ಥಿತಿಯಲ್ಲಿ ಸಾಧ್ಯವೇ? ಸಾಧ್ಯವಾಗುವುದಾದರೆ ಹೇಗೆ? ಅಧ್ಯಾತ್ಮವೆಂದರೇನು? ಮಾಧ್ಯಮವೆಂದರೇನು? ಆದರ್ಶ ಮಾಧ್ಯಮ ಯಾವ ರೀತಿ ಕೆಲಸ ಮಾಡಬೇಕು? ಅದರಲ್ಲಿ ಎದುರಾಗುವ ಅಡೆತಡೆಗಳೇನು? – ಈ ಸಾಂದರ್ಭಿಕ ವಿಚಾರಗಳನ್ನು ಕುರಿತು ವಿದ್ವಾಂಸರು ವ್ಯಕ್ತಪಡಿಸಿದ ವಿವಿಧ ನಿಲುವುಗಳನ್ನು ನಾವು ಈ ಸಂಚಿಕೆಯಲ್ಲಿ ಪ್ರಸ್ತುತ ಪಡಿಸುತ್ತಿದ್ದೇವೆ. ದಿನಾಂಕ ೧.೧.೨೦೦೯ ರಂದು ವಿವೇಕಪ್ರಭ ಪತ್ರಿಕೆಯ ದಶಮಾನೋತ್ಸವದ ಉದ್ಘಾಟನಾ ಸಮಾರಂಭದ ಅಂಗವಾಗಿ ಏರ್ಪಡಿಸಿದ್ದ 'ಅಧ್ಯಾತ್ಮ ಮತ್ತು ಮಾಧ್ಯಮ' ದ ಬಗೆಗಿನ ವಿಚಾರಸಂಕಿರಣದಲ್ಲಿ ಮೂಡಿ ಬಂದ ಈ ವಿಚಾರಗಳನ್ನು ನಮ್ಮ ಓದುಗರ ಪ್ರಯೋಜನಕ್ಕಾಗಿ ಪ್ರಕಟಿಸುತ್ತಿದ್ದೇವೆ. ಇದರ ಬಗ್ಗೆ ತಮ್ಮ ವಿಮರ್ಶೆಗಳಿಗೆ ಸ್ವಾಗತ. –ಸಂ.


## ಡಾ. ಸಿ.ಪಿ. ಕೃಷ್ಣಕುಮಾರ್

*(ವಿಚಾರ ಸಂಕಿರಣದ ಮುಖ್ಯ ಅತಿಥಿಗಳಾಗಿದ್ದ ಶ್ರೀಯುತರು ಕನ್ನಡದ ಪ್ರಸಿದ್ಧ ಲೇಖಕರು; ಶ್ರೀರಾಮಕೃಷ್ಣ ಆಶ್ರಮದ ಭಕ್ತರು.)*


'ಅಧ್ಯಾತ್ಮ ಮತ್ತು ಮಾಧ್ಯಮ' ಎಂಬುದು ಸ್ವಾರಸ್ಯಪೂರ್ಣವೂ ಕುತೂಹಲಕರವೂ ಆದ ವಿಷಯ. ಎರಡಕ್ಕೂ 'ಎತ್ತಣಿಂದೆತ್ತಣ ಸಂಬಂಧವಯ್ಯ' ಎಂದು ಆರಂಭದಲ್ಲಿಯೆ ಅನಿಸಿದರೆ, ಆಶ್ಚರ್ಯವಿಲ್ಲ!

ಪ್ರಸ್ತುತ ಯುಗವನ್ನು ಹಲವು ಹೆಸರುಗಳಿಂದ, ವಿಶೇಷಣಗಳಿಂದ ಕರೆಯಬಹುದು. ಅವುಗಳಲ್ಲಿ ಒಂದು 'ಮಾಧ್ಯಮಗಳ ಯುಗ' ಎಂಬುದು! ಹಿಂದಿಲ್ಲದ ಅನೇಕ ಸಮೂಹಮಾಧ್ಯಮಗಳು ಮತ್ತು ವಿದ್ಯುನ್ಮಾನ ದೃಶ್ಯ ಮಾಧ್ಯಮಗಳು ಇಂದು ಸಾರ್ವಜನಿಕ ಚೇತನದಲ್ಲಿ ಮಹತ್ವದ ಪಾತ್ರ ವಹಿಸುತ್ತಿವೆ. ಈ ಮಾಧ್ಯಮಗಳ ಬಗೆಗೆ ವಿವರಣೆ ಅನಾವಶ್ಯಕ. ಆದರೆ ಅಧ್ಯಾತ್ಮ ಎಂದರೇನು ಎಂಬುದನ್ನು ಸ್ವಲ್ಪ ಸ್ಪಷ್ಟೀಕರಿಸಿಕೊಳ್ಳಬೇಕು.

ಸಾಮಾನ್ಯವಾಗಿ ಅಧ್ಯಾತ್ಮ, ಧರ್ಮ ಎಂಬ ಎರಡು ಮಾತುಗಳು ಸಮಾನಾರ್ಥಕಗಳಾಗಿ ಬಳಕೆಗೊಳ್ಳುತ್ತವೆ. ಎರಡಕ್ಕೂ ನಿಕಟ ಸಂಬಂಧವಿರುವುದರಿಂದ ಈ ಬಳಕೆ ತಪ್ಪಲ್ಲವಾದರೂ, ಅಧ್ಯಾತ್ಮ ಹಾಗೂ ಧರ್ಮ ಅಭಿನ್ನವಲ್ಲ ಎಂಬುದನ್ನು ಗಮನಿಸಬೇಕು. ಅಧ್ಯಾತ್ಮ ಆಂತರಂಗಿಕವಾದದ್ದು; ಧರ್ಮವಾದರೋ ಬಹುಮಟ್ಟಿಗೆ ಬಹಿರ್ಮುಖಿ. ಅಧ್ಯಾತ್ಮದ ವ್ಯಕ್ತರೂಪವೇ ಧರ್ಮ ಎಂದರೂ ಸರಿಯೆ.

**'ಅನುಭಾವವೆಂಬುದು ಅಂತರಂಗದ ರತ್ನ'** ಎಂಬ ಶರಣಸೂಕ್ತಿ ಅಧ್ಯಾತ್ಮಕ್ಕೂ ಅನ್ವಯಿಸುವಂಥದು. ಅನುಭಾವ ಬೇರೆಯಲ್ಲ; ಅಧ್ಯಾತ್ಮ ಬೇರೆಯಲ್ಲ. ಆದರೆ ನಿರ್ವಿಕಲ್ಪ ಸಮಾಧಿ ಅಧ್ಯಾತ್ಮ ಎನ್ನಿಸಿಕೊಳ್ಳುತ್ತದೆಯೇ ಹೊರತು ಧರ್ಮವೆನ್ನಿಸಿಕೊಳ್ಳುವುದಿಲ್ಲ. "ಒಬ್ಬ ವ್ಯಕ್ತಿ ಏಕಾಂತತೆಯಲ್ಲಿರುವುದೇ ಧರ್ಮ" ಎಂಬ ಎ.ಎನ್. ವೈಟ್‌ಹೆಡ್ ಅವರ ಹೇಳಿಕೆ ವಾಸ್ತವವಾಗಿ ಅಧ್ಯಾತ್ಮಕ್ಕೆ ಒಪ್ಪುತ್ತದೆ.

ಅಧ್ಯಾತ್ಮ ಮತ್ತು ಧರ್ಮ ಒಂದೇ ಎಂದು ಅನುಕೂಲಕ್ಕಾಗಿ ಪರಿಗಣಿಸಿ ನೋಡುವುದಾದರೆ, ಇಂದು ಮಾಧ್ಯಮ ಮತ್ತು ಅಧ್ಯಾತ್ಮ ಬಹುಮಟ್ಟಿಗೆ ಪರಸ್ಪರ ವಿರುದ್ಧವೆನ್ನಬಹುದು. ಮಾಧ್ಯಮಗಳಲ್ಲಿ ಪ್ರಾಶಸ್ತ್ಯ, ಪ್ರಾಧಾನ್ಯಗಳಿರುವುದು ಅರ್ಥಕಾಮಗಳಿಗೆ, ಧರ್ಮಕ್ಕಲ್ಲ! ದೂರದರ್ಶನದಂತಹ ದೃಶ್ಯಮಾಧ್ಯಮಗಳಲ್ಲಿ ವಿಕೃತಿಯ ವಿಜೃಂಭಣೆಯನ್ನು ಕಾಣುತ್ತೇವೆ; ಅವು ಅಸಭ್ಯತೆ, ಅಶ್ಲೀಲತೆಗಳನ್ನು ವೈಭವೀಕರಿಸುತ್ತವೆ; ತನ್ಮೂಲಕ ಜನಮಾನಸವನ್ನು, ಅದರಲ್ಲೂ ಯುವಜನತೆಯ ಚಿತ್ತವನ್ನು ಕೆರಳಿಸಿ, ಅಸ್ವಸ್ಥವಾಗಿಸುವುದರಲ್ಲಿ ನಿರತವಾಗಿವೆ.

ಇಂದು ಮಾಧ್ಯಮಗಳು ತುಂಬ ಪ್ರಭಾವಶಾಲಿ ಮತ್ತು ಪರಿಣಾಮಕಾರಿ ಎಂಬುದರಲ್ಲಿ ಸಂದೇಹವಿಲ್ಲ. ಅವು ಬಹುತೇಕ ದುರುಪಯೋಗಗೊಳ್ಳುತ್ತಿರುವುದು ವಿಷಾದನೀಯ. ಅವು ಸದುಪಯೋಗಗೊಳ್ಳಬೇಕು ಎನ್ನುವುದು ಮುಖ್ಯ ವಿಚಾರ. ಕೆಲವು ಹೇಳಿಕೆಗಳನ್ನು ಇಲ್ಲಿ ಗಮನಿಸಬಹುದು: " ಒಳ್ಳೆಯವರಾಗಿರುವುದು, ಒಳ್ಳೆಯದು ಮಾಡುವುದು; ಇದೇ ಧರ್ಮದ ತಿರುಳು" ಎಂದೂ, "ಜನರಿಗೆ ಸೇವೆ ಮಾಡುವುದು ಮಾತ್ರವೇ ಅತ್ಯುದಾತ್ತ ಧರ್ಮ" ಎಂದೂ ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಸ್ವಾಮಿ ಶಿವಾನಂದರ ಉಕ್ತಿ ಇದು: "ನಿಸ್ವಾರ್ಥ ಮಾನವಸೇವೆಯೂ ಆಧ್ಯಾತ್ಮಿಕ ಸಾಧನೆಯೇ ಆಗಿದೆ."

**'ಧರ್ಮಂ ಪ್ರಧಾನಂ'** ಎನ್ನುವ ಪಂಪ ಕವಿ, ಅದರ 'ಪಂಚಾಂಗ' ಗಳನ್ನು ಹೀಗೆ ಹೇಳುತ್ತಾನೆ: ದಯೆ, ದಮ, ದಾನ, ತಪ ಮತ್ತು ಶೀಲ.

ಪ್ರಪಂಚವೆಲ್ಲ ಕೆಟ್ಟುಹೋಗಿಲ್ಲ, ಸಮಾಜವೆಲ್ಲ ಭ್ರಷ್ಟವಾಗಿಲ್ಲ ಎಂಬುದನ್ನು ನಾವು ನೆನಪಿಡಬೇಕು. ಒಳ್ಳೆಯದು ಯಾವುದೋ ಪ್ರಮಾಣದಲ್ಲಿ ಖಂಡಿತ ಉಂಟು. ಇಲ್ಲದಿದ್ದರೆ, ಯಾರೂ ಬದುಕುವುದೇ ಸಾಧ್ಯವಾಗುತ್ತಿರಲಿಲ್ಲ! ಆದರೆ ಅದು ಅಷ್ಟಾಗಿ ಮಾಧ್ಯಮಗಳಲ್ಲಿ ಸುದ್ದಿಯಾಗುವುದಿಲ್ಲ; ಉದ್ರೇಕಕಾರಿಯಾದುದು ಮಾತ್ರ ಸುದ್ದಿಯಾಗುತ್ತದೆ, ಶಮಪ್ರಧಾನವಾದುದು ಅಲ್ಲ!

ಸುದ್ದಿಯಾಗದ ಒಳ್ಳೆಯ ಸಂಗತಿಗಳನ್ನು, ಘಟನೆಗಳನ್ನು

ಕುವೆಂಪು 'ಅಪತ್ರಿಕಾ ವಾರ್ತೆ' ಗಳೆಂದು ಕರೆದರು. ಇಂದು ನಾವು ಅವುಗಳನ್ನು 'ಅಮಾಧ್ಯಮ ವಾರ್ತೆ'ಗಳೆಂದು ಕರೆಯಬಹುದು! ಅವುಗಳಿಗೆ ಮಾಧ್ಯಮಗಳಲ್ಲಿ ಮಾನ್ಯತೆ ದೊರೆಯಬೇಕು.

ಪತ್ರಿಕೆಗಳಲ್ಲಿ ಒಳಿತು ಇಂದು ವರದಿಯಾದರೂ, ಯಾರೂ ಗಮನಿಸದ ಕಡೆ, ಎಲ್ಲೋ ಒಂದು ಮೂಲೆಯಲ್ಲಿ ಅದಕ್ಕೆ ಸ್ಥಾನ ನೀಡಲಾಗುತ್ತದೆ. ಮುಖಪುಟದಲ್ಲಿ ವಿರಾಜಿಸುವುದು, ಭ್ರಷ್ಟಾಚಾರ, ಅನಾಚಾರ, ಅತ್ಯಾಚಾರಗಳ ವಾರ್ತೆಗಳೇ; ಸದಾಚಾರದ ಸುದ್ದಿಗಳಲ್ಲ! ದೂರದರ್ಶನದಲ್ಲಿ ಆಧ್ಯಾತ್ಮಿಕ ಅಂಶಗಳು ಪ್ರಸಾರಗೊಳ್ಳುವುದುಂಟು. ಆದರೆ ಯಾವಾಗ? ಎಷ್ಟೋ ಮಂದಿ ನೋಡದ ಸಮಯದಲ್ಲಿ!

ಸಂಸ್ಕೃತಿಯ ಸ್ವರೂಪವನ್ನು ಮ್ಯಾಥ್ಯೂ ಅರ್ನಾಲ್ಡ್ ಎರಡು ಮಾತುಗಳಲ್ಲಿ ಸಂಗ್ರಹಿಸುತ್ತಾನೆ: **ಮಾಧುರ್ಯ** ಮತ್ತು **ಬೆಳಕು**. ಈಗ ಮಾಧುರ್ಯವೇನೋ ಇದೆ; ಬೆಳಕಿಲ್ಲ, ಥಳಕಿದೆ! ಮಾಧ್ಯಮಗಳು ಒಳಬೆಳಕನ್ನು ತುಳುಕಿಸಿ, ಮಾರ್ಗದರ್ಶನ ಮಾಡಬೇಕು, ಸಮಾಜಕ್ಕೆ, ಅದರಲ್ಲೂ ಯುವಪೀಳಿಗೆಗೆ!

ಗೋಪಾಲಕೃಷ್ಣ ಗೋಖಲೆಯವರ ಹೇಳಿಕೆಯೊಂದು ಬಹಳ ಮನನೀಯವಾಗಿದೆ: "Public life must be spiritualised" (ಸಾರ್ವಜನಿಕ ಬದುಕು ಆಧ್ಯಾತ್ಮೀಕರಣವಾಗಬೇಕು). ಈ ದಿಶೆಯಲ್ಲಿ ಮಾಧ್ಯಮಗಳ ಪಾತ್ರ ಪ್ರಾಮುಖ್ಯದ್ದು. ಅದನ್ನು ಅವು ಜವಾಬ್ದಾರಿಯುತವಾಗಿ ನಿರ್ವಹಿಸಬೇಕು. ಪ್ರೇಯಸ್ಸಿಗಿಂತ ಶ್ರೇಯಸ್ಸಿಗೆ ಪ್ರಾಶಸ್ತ್ಯ ಕೊಡಬೇಕು. ಶ್ರೇಯಸ್ಸು, ಪ್ರೇಯಸ್ಸುಗಳ ಆರೋಗ್ಯಕರ ಸಮನ್ವಯ ಈ ಹೊತ್ತಿನ ಅಗತ್ಯ.

## ಶಿಕಾರಿಪುರ ಹರಿಹರೇಶ್ವರ

*(ಇವರು ವೃತ್ತಿಯಲ್ಲಿ ಇಂಜಿನೀರ್ ಆಗಿದ್ದವರಾದರೂ ಪ್ರವೃತ್ತಿಯಲ್ಲಿ ಸಾಹಿತ್ಯಾಭಿಮಾನಿಗಳು. ಅಮೆರಿಕದಲ್ಲಿ ಹಲವಾರು ವರ್ಷಗಳ ಕಾಲ ಕನ್ನಡ ನುಡಿಯ ಸೇವೆಯಲ್ಲಿ ತೊಡಗಿಸಿಕೊಂಡವರು.)*

ಇವತ್ತು ನಾವೆಲ್ಲ ಸೇರಿ ಇಲ್ಲಿ ಪಾಲ್ಗೊಳ್ಳುತ್ತಿರುವ ವಿಚಾರ ಸಂಕಿರಣ ನನಗಂತೂ ಬಹು ಮಹತ್ವಪೂರ್ಣವಾದದ್ದು. ಅದು ಮೂರು ಕಾರಣಗಳಿಗಾಗಿ. ಮೊದಲನೆಯದು, ಈ ಸಮಾವೇಶ ವನ್ನು ನಡೆಸುತ್ತಿರುವ ಸಂಸ್ಥೆ. ಜಗತ್ತಿಗೆ ಭಾರತದ ಒಂದು ವಿಶಿಷ್ಟ ಕೊಡುಗೆಯಾದ ಅಧ್ಯಾತ್ಮವಿಚಾರಾಮೃತ ಲಹರಿಯನ್ನು ವಿಶ್ವಾದ್ಯಂತ ಸಮರ್ಥವಾಗಿ ಬಿತ್ತರಿಸಲು ಕಾರಣರಾದವರು, ಸ್ವಾಮಿ ವಿವೇಕಾನಂದರು. ಅವರೇ ಅಂತಹ ಮಹತ್ಕಾರ್ಯದಲ್ಲಿ ಮೊದಲಿಗರು. ಅವರು ಹುಟ್ಟುಹಾಕಿದ ಜಗತ್‌ಪ್ರಸಿದ್ಧ ಸಂಸ್ಥೆ ಶ್ರೀರಾಮಕೃಷ್ಣ ಆಶ್ರಮ. ಎರಡನೆಯದು, ಈ ವೇದಿಕೆ. ಹಿರಿಯರೂ, ಜ್ಞಾನವೃದ್ಧರೂ ಪಂಡಿತೋತ್ತಮರೂ ಆದವರ ಸಾನ್ನಿಧ್ಯದಲ್ಲಿ, ಈ ವೇದಿಕೆಯಿಂದ ನನ್ನ ಕೆಲವು ಅನಿಸಿಕೆಗಳನ್ನು, ನನಗಿರುವ ಅಲ್ಪ ಕಾಲಾವಧಿಯಲ್ಲಿ ಹಂಚಿಕೊಳ್ಳಲು ಸಿಕ್ಕಿರುವ ಅವಕಾಶ. ಮೂರು, ನನ್ನ ಮತ್ತು ನನ್ನ ಜೊತೆಯ ಆತ್ಮೀಯರ ಮಾತುಗಳನ್ನು ಕೇಳಲು ಬಂದಿರುವ ಬುದ್ಧಿಜೀವಿ ಜನಸ್ತೋಮ.

ನನಗೆ ಕೊಟ್ಟ ಈ ಅವಕಾಶಕ್ಕಾಗಿ ವ್ಯವಸ್ಥಾಪಕರಿಗೆ ಇನ್ನೊಮ್ಮೆ ಕೃತಜ್ಞತೆಗಳನ್ನು ಸಮರ್ಪಿಸುತ್ತ, ನಾಲ್ಕು ಮಾತುಗಳನ್ನು ಆಡಲು ನಿಮ್ಮ ಮುಂದೆ ನಿಂತಿದ್ದೇನೆ. ಇಲ್ಲಿ ನಾನು ಹೇಳುವುದು ವಾಲ್ಮೀಕಿ ರಾಮಾಯಣದಲ್ಲಿ ಸೀತೆ ರಾಮನಿಗೆ ಹೇಳಿದಂತೆ, **"ಸ್ಮಾರಯೇ, ನ ತು ಶಿಕ್ಷಯೇ"** ಮಾದರಿಯಲ್ಲಿ. "ನಿಮಗಿವೆಲ್ಲ ಗೊತ್ತೇ ಇದೆ, ಸ್ವಲ್ಪ ಜ್ಞಾಪಿಸುತ್ತಿದ್ದೇನೆ ಅಷ್ಟೇ" ಎಂಬ ಧಾಟಿಯಲ್ಲಿ!

ಮನುಷ್ಯನ ಪರಮೋಚ್ಚ ಗುರಿ ಎಂದರೆ ನೆಮ್ಮದಿಯಿಂದ ಇರುವುದು, ಸುಖವಾಗಿ ಬಾಳುವುದು, ಜೀವನದಲ್ಲಿ ಆದಷ್ಟು ಕಡಮೆ ದುಃಖ ಪಡುವುದು, ದುಃಖಕ್ಕೆ ಮಣಿಯದೆ ಅದನ್ನು ಎದುರಿಸುವ ಮನಸ್ಥಿತಿಯನ್ನು ತಳೆಯುವುದು. ಸುಖ ಬಂದಾಗ ಹಿಗ್ಗದೆ, ದುಃಖ ಬಂದಾಗ ಕುಗ್ಗದೆ, ಈ ಸುಖ ದುಃಖ –ಎರಡನ್ನೂ ಆದಷ್ಟೂ ಸಮವಾಗಿ ಕಾಣುವುದು, ಸಾಧ್ಯವಾದರೆ 'ದುಃಖಕ್ಕೆ ಏನು ಮೂಲ ಕಾರಣ?' ಎಂದು ಹುಡುಕುವುದಕ್ಕೆ ಪ್ರಯತ್ನ ಪಡುವುದು, ಆ ದುಃಖದ ಮೂಲಕ್ಕೆ ತಾನು ವಶವಾಗದೇ ಇರುವ ಹಾಗೆ ಇರುವುದಕ್ಕೆ ಪ್ರಯತ್ನಪಡುವುದು; ಶಮ, ದಮ, ನಿಗ್ರಹ, ಸಹನೆ, ದಯೆ ಇತ್ಯಾದಿಗಳ ನೆರವಿನಿಂದ ಬಾಳಿನಲ್ಲಿ ಶಾಂತಿಯನ್ನು ಪಡೆಯುವುದು. ಯಾವುದೇ ಕಾಲ, ದೇಶ ಅಥವಾ ಜನಾಂಗ ಇರಲಿ ಹೆಚ್ಚುಕಡಮೆ ಜಗತ್ತಿನ ಎಲ್ಲ ಕಡೆ, ಹಿಂದಿನಿಂದ ಇಂದಿನವರೆಗೂ ಸಾಮಾನ್ಯವಾಗಿ ಎಲ್ಲರ ಜೀವನದ ಮುಖ್ಯ ಉದ್ದೇಶ ಇದೇ ಎಂದು ಧೈರ್ಯವಾಗಿ ಹೇಳಬಹುದು.

ಲೌಕಿಕ ವ್ಯವಹಾರಕ್ಕೆ ನೇರವಾಗಿ ಸಂಬಂಧಪಡದ, ಭಾವನೆ ಗಳಿಗೆ, ಯೋಚನೆಗಳಿಗೆ, ಚಿಂತನೆಗಳಿಗೆ ಏನಾದರೊಂದು ಹೆಸರಿಟ್ಟು ಕರೆಯಬೇಕು ಎಂದರೆ, ನಮಗೆ ಥಟ್ಟನೆ ಹೊಳೆಯುವ ಒಂದು ಜನಪ್ರಿಯ ಪದ 'ಅಧ್ಯಾತ್ಮ'. ಈ ಪದಕ್ಕೆ ಏನೇನೋ ವಿಶೇಷ ಅರ್ಥಗಳ ಪ್ರಭಾವಲಯ ಹಬ್ಬಿ ಹರಡಿಕೊಂಡಿದ್ದರೂ, ನಾನೀಗ ಹೇಳಿದ್ದು ಅದರ ಒಂದು ಸುಲಭ ಸರಳ ಅರ್ಥ. 'ಅಧ್ಯಾತ್ಮ' ಅಂದರೆ ಏನು? ಅದು ಆತ್ಮನಿಗೆ ಸಂಬಂಧಪಟ್ಟಿದ್ದು, ಆತ್ಮವನ್ನು ಕುರಿತದ್ದು. ಅಗೋಚರವಾದ ಯಾವುದೋ ಒಂದು ಶಕ್ತಿ ಈ ಇಡೀ ಪ್ರಪಂಚವನ್ನು ಮತ್ತು ನಮ್ಮನ್ನು ನಿಯಂತ್ರಿಸುತ್ತಿದೆಯಲ್ಲ, ಅದಕ್ಕೂ ನಮಗೂ ಇರುವ ಸಂಬಂಧದ ಬಗ್ಗೆ ವಿಚಾರ ಮಾಡುವ ಚರ್ಚೆಗೆ ಸಂಬಂಧಪಟ್ಟದ್ದು, ಈ ವಿಚಾರದಲ್ಲಿ ಬೇಕಾಗಿರುವ ತಿಳಿವಳಿಕೆಗೆ ಸಂಬಂಧಪಟ್ಟದ್ದು. ಅಧ್ಯಾತ್ಮ ಅನ್ನುವ ಪದಕ್ಕೆ ಇನ್ನೂ ಹೆಚ್ಚಿನ ಅರ್ಥಗಳನ್ನು ಕೋಶಗಳು ಕೊಡುತ್ತವೆ. ಸಾಮಾನ್ಯರ ಬಾಯಿಯಲ್ಲಿ ಅಧ್ಯಾತ್ಮ ಅಂದರೆ ದೇವರು ದಿಂಡರ ಸಮಾಚಾರ ಅಂತ ಸಹ ಆಗಿಬಿಡುವ ಅಪಾಯವೂ ಇದೆ.

ಇರಲಿ, ಆತ್ಮಕ್ಕೆ ಸಂಬಂಧಪಟ್ಟಿದ್ದು, ಜೀವಾತ್ಮ ಮತ್ತು ಪರಮಾತ್ಮ ಇವೆರಡರ ಸಂಬಂಧ, ಆ ಪರಮಾತ್ಮನಲ್ಲಿ ನಾವು ಇಟ್ಟುಕೊಳ್ಳುವ ನಂಬಿಕೆ, ಗೌರವ, ಶ್ರದ್ಧೆ, ಭಕ್ತಿ, ಪೂಜೆ, ಆರಾಧನೆ, ತಪಸ್ಸು – ಕೊನೆಗೆ ಎಲ್ಲದರಿಂದ ಬಿಡುಗಡೆ, ಮುಕ್ತಿ, ಆ ಪರಮಾತ್ಮನ ಬಳಿಯೇ ಹೋಗಿ ಸೇರಿಬಿಡುವುದು, ಇಲ್ಲವೇ ಇನ್ನೂ ಕೆಲವರ ಪ್ರಕಾರ ಆ ಭಗವಂತನಲ್ಲಿಯೇ ಒಂದಾಗಿ ಬಿಡುವುದು ಇತ್ಯಾದಿ ವಿಚಾರಗಳ

ಚಿಂತನ, ಮಂಥನಗಳೇ ಅಧ್ಯಾತ್ಮದ ಒಳತಿರುಳು.

ಇದು ಬಹಳ ಗಹನ, ಬಹಳ ಗೂಢ, ನಿಗೂಢ; 'ಇನ್ನೇನು ತಿಳಿದುಹೋಯಿತು', 'ಓಹೋ ತಿಳಿದುಹೋಯಿತು'– ಅನ್ನುವಷ್ಟು ಸುಲಭ. ಹಾಗೇನೇ, 'ಏನೂ ಗೊತ್ತಾಗುತ್ತಿಲ್ಲವಲ್ಲ' ಅನ್ನುವ ಕೊರಗು ನಮ್ಮಲ್ಲಿ ಇದ್ದೇ ಇರುತ್ತದೆ. ಹೇಗೆ ಅರ್ಥಮಾಡಿಕೊಳ್ಳಬೇಕು ಎಂದು ತಿಳಿಯದೇ ಹೋಗುವಷ್ಟು ಜಟಿಲ, ಕ್ಲಿಷ್ಟ ಇದು. ಮಾತಿಗೆ ಮೀರಿದ ಅಭಿವ್ಯಕ್ತಿಯ ಗಡಿಯಾಚೆ ಇರುವ ಅನುಭವಕ್ಕೆ ಸಂಬಂಧಿಸಿದವು ಅಧ್ಯಾತ್ಮದ ಲಹರಿಗಳು.

ಅಧ್ಯಾತ್ಮ ಎಂಬುದರ ಕೇಂದ್ರ ಬಿಂದು ದೇವರು.

**ದೇವರೆಂಬುದದೇನು ಕಗ್ಗತ್ತಲ ಗವಿಯೇ?**
**ನಾವರಿಯಲಾರದೆಲ್ಲದರ ಒಟ್ಟು ಹೆಸರೇ? ।**

**ಜೀವ ಜಡರೂಪ ಪ್ರಪಂಚವನಾವುದೋ**
**ಆವರಿಸಿಕೊಂಡುಮೊಳನೆರದುಮಿಹುದಂತೆ ।**
**ಭಾವಕೊಳಪಡದಂತೆ ಅಳತೆಗಳವಡದಂತೆ**
**ಆ ವಿಶೇಷಕೆ ನಮಿಸೋ ಮಂಕುತಿಮ್ಮ ॥**
**ಇಹುದೋ ಇಲ್ಲವೋ ತಿಳಿಯಗೊಡದ ಒಂದು ವಸ್ತು**
**ನಿಜ ಮಹಿಮೆಯಿಂ ಜಗವಾಗಿ ಜೀವ ವೇಷದಲಿ ।**
**ವಿಹರಿಪುದದೊಳ್ಳಿತೆಂಬುದು ನಿಸದವಾದೊಡಾ**
**ಗಹನ ತತ್ತ್ವಕೆ ನಮಿಸೊ ಮಂಕುತಿಮ್ಮ ॥**

ಆ ಗಹನತತ್ತ್ವವನ್ನು ಅದೆಷ್ಟೇ ಕಗ್ಗಂಟಾಗಿರಲಿ, ಬಿಡಿಸಿ ಬಿಡಿಸಿ ತಿಳಿದುಕೊಳ್ಳಲು ಪ್ರಯತ್ನ ಪಡುವುದೇ ಅಧ್ಯಾತ್ಮದ ಹೆಗ್ಗುರಿ.

ಇನ್ನೊಂದು ವಿಶಿಷ್ಟ ಹೆಸರನ್ನು ಇಲ್ಲಿ ಬಳಸತೊಡಗುತ್ತೇವೆ. ಅದೇ **'ಅನುಭಾವ.'** ಅಧ್ಯಾತ್ಮದ ತುತ್ತತುದಿಯನ್ನು, ಎತ್ತರದ ಮೇರುಶಿಖರವನ್ನು ಏರಿದವರು ಅನುಭಾವಿಗಳು. ಶ್ರೀರಾಮ ಕೃಷ್ಣ ಪರಮಹಂಸರು ಅನುಭಾವಿಗಳ ಪರಂಪರೆಯಲ್ಲಿ ಬಹು ಪ್ರಮುಖರು. ಭಾರತದ, ಅಷ್ಟೇಕೆ ಜಗತ್ತಿನ ಧಾರ್ಮಿಕ ಇತಿಹಾಸದಲ್ಲಿ ದಾರ್ಶನಿಕರ, ಅನುಭಾವಿಗಳ ಒಂದು ವಿಶಾಲ ತಾರಾನಿವಹವೇ ವಿಜೃಂಭಿಸುತ್ತಿದೆ.

ಅಧ್ಯಾತ್ಮದ ಹಾದಿಯಲ್ಲಿ ಮುನ್ನಡೆದು, ತಾವು ಕಂಡುಕೊಂಡ ಬೆಳಕನ್ನು ದಾರಿಯುದ್ದಕ್ಕೂ ಚೆಲ್ಲುತ್ತ, ಆ ಜಾಡಿನಲ್ಲಿ ಸಾಗುತ್ತೇವೆ ಎನ್ನುವವರಿಗೆ ಹಲವಾರು ಮಂದಿ ಮನುಕುಲೋದ್ಧಾರಕರು ಕೈದೀವಿಗೆಯಾಗಿ ನಿಂತಿದ್ದಾರೆ. ಅವರ ಬಗ್ಗೆ ಯೋಚಿಸಿದಾಗ, ವ್ಯಾಸ, ವಾಲ್ಮೀಕಿಗಳಂಥ ಕವಿ–ದಾರ್ಶನಿಕರು; ಬುದ್ಧ, ಯೇಸು, ಮುಹಮ್ಮದ್ ಮೊದಲಾದ ಪ್ರವಾದಿಗಳು; ಬಸವ, ಅಲ್ಲಮ, ಅಕ್ಕ ಮಹಾದೇವಿ ಮುಂತಾದ ಶಿವ ಶರಣ–ಶರಣೆಯರು; ಭಕ್ತಿ ಪಂಥದ ಮೀರಾ, ಆಂಡಾಳ್, ಕಬೀರ್ ಮೊದಲಾದ ಸಂತರು; ಪುರಂದರ, ಕನಕ ಮುಂತಾದ ದಾಸವರೇಣ್ಯರು– ಇವರೆಲ್ಲ ನಮ್ಮ ಕಣ್ಣಮುಂದೆ ಹಾದು ಹೋಗುತ್ತಾರೆ.

**'ಆ ನೋ ಭದ್ರಾಃ ಕ್ರತವೋ ಯನ್ತು ವಿಶ್ವತಃ'**

"ನಾವು ಕಿಟಕಿ ಬಾಗಿಲುಗಳನ್ನು ತೆರೆದಿಟ್ಟಿದ್ದೇವೆ; ಒಳ್ಳೆಯ ಬೆಳಕು ನಮಗೆ ವಿಶ್ವದ ಎಲ್ಲ ಕಡೆಯಿಂದ ಬರಲಿ!"– ಎಂಬುದು ನಮ್ಮ ಹಾರೈಕೆ.

**ಇಲ್ಲದೆಲ್ಲದದರಿಂದ ನಿಜವಾಗಿ ಇರುವೆಡೆಗೆ,**
**ಇರುಳು ಕಗ್ಗತ್ತಲಿನಿಂದ ಬೆಳ್ಳಿ ಬೆಳಕಿನ ಕಡೆಗೆ,**
**ಅಳಿವುಮುಳಿವಿಂದ ಚಿರ ಇರವಿನ**
**ಸುಳಿವೆಡೆಗೆ, ತಿಳಿವಿನೆಡೆಗೆ–**
**ಬಾ ನನ್ನ ಕೊಂಡೊಯ್ಯು, ಓ ಗುರುವೇ, ದೇವ!**

ಎಂಬ ಶಾಂತಿಮಂತ್ರವನ್ನು ಜಪಿಸುವುದು ನಮ್ಮ ಪ್ರವೃತ್ತಿ. ಇರುವುದೊಂದೇ ದಾರಿ ಮುಕ್ತಿಮಾರ್ಗಕೆ– **'ನಾನ್ಯಃ ಪಂಥಾಃ ವಿದ್ಯತೇ ಅಯನಾಯ'**. ಈ ಅಧ್ಯಾತ್ಮದ ಹಾದಿಯಲ್ಲಿ ನಾವು ಸಾಗೋಣ.

ಈಗ ಮಾಧ್ಯಮದ ಬಗ್ಗೆ ವಿಚಾರ ಮಾಡೋಣ. ಆನಂದ, ಹರ್ಷ, ಉಲ್ಲಾಸ, ಸಂತೋಷ ಇತ್ಯಾದಿಗಳು ಅನುಭವಿಸಿ ತಿಳಿಯ ಬೇಕಾದ ಸುಖದ ಬೇರೆ ಬೇರೆ ರೂಪಗಳು. ಅವುಗಳನ್ನು ಮಾತಿನಲ್ಲಿ ಹೇಳುವುದಕ್ಕಾಗಲಿ, ಕೇಳಿ ತಿಳಿದುಕೊಳ್ಳುವುದಕ್ಕಾಗಲಿ, ಬರೆದು ಚಿತ್ರಿಸುವುದಕ್ಕಾಗಲಿ, ನೋಡಿ ಗ್ರಹಿಸುವುದಕ್ಕಾಗಲಿ ಸಾಧ್ಯವಾಗುವುದಿಲ್ಲ. ಅವು ಅಳತೆಗೆ ಅಳವಡದ್ದು. ಆದರೂ ಇದಕ್ಕೆ ಸಂಬಂಧಿಸಿದ ಮುಖ್ಯ ಹೊರನೋಟಗಳನ್ನು ಸೂಚಿಸಲು ಸಾಧ್ಯವಿದೆ. ತಾನು ಅರ್ಥಮಾಡಿಕೊಂಡುದನ್ನು, ತನಗೆ ತಿಳಿದುದನ್ನು, ತಾನು ಅನುಭವಿಸಿದ್ದನ್ನು ಕೇಳುಗರಿಗೆ ಅರ್ಥವಾಗುವ ರೀತಿಯಲ್ಲಿ ಮನದಟ್ಟು ಮಾಡುವ ಸಲುವಾಗಿ ಸಮಯೋಚಿತವಾಗಿ ವ್ಯಕ್ತಪಡಿಸುವುದು ಒಂದು ಕಲೆ. ಇದೇ ಅಭಿವ್ಯಕ್ತಿ, ಸಂವಹನ, ಕಮ್ಯೂನಿಕೇಷನ್. ಇದನ್ನೇ **ಮಾಧ್ಯಮ** ಎಂದು ಕರೆಯುವುದು.

ಬಹಳ ದಿನಗಳ ಹಿಂದೆ, ಯಜ್ಞಯಾಗಾದಿಗಳನ್ನು ನಡೆಸಿ ಮುಗಿಸಿದ ನಂತರ, ಅಲ್ಲಿ ನೆರೆದಿದ್ದ ಜನಸ್ತೋಮಕ್ಕೆ ಅವರಲ್ಲೊಬ್ಬ ಮಹರ್ಷಿಯೋ, ಪುರಾಣಿಕನೋ ಪ್ರವಚನ ಮಾಡುತ್ತಿದ್ದುದುಂಟು. ಇದೇ ಪದ್ಧತಿ ಬೇರೆ ಬೇರೆ ವಿಶೇಷ ಧಾರ್ಮಿಕ ಕಾರ್ಯಕ್ರಮಗಳ ಕೊನೆಯಲ್ಲೂ ನಡೆಯುತ್ತಿತ್ತು. ಗುರುವನ್ನು ಅರಸಿ ಹೋಗುತ್ತಿದ್ದ ಶಿಷ್ಯವೃಂದಕ್ಕೆ ಗುರುಕುಲವಾಸದಲ್ಲಿ ಬೋಧನೆ ಅವ್ಯಾಹತವಾಗಿ ಸಾಗುತ್ತಿತ್ತು. ಎಷ್ಟೋ ಬಾರಿ ತಂದೆಯೇ ಮಗನಿಗೆ ಗುರುವಾಗಿದ್ದುಂಟು. ತಾನು ತಿಳಿದುಕೊಂಡಿದ್ದನ್ನೆಲ್ಲ ಗುರು ಶಿಷ್ಯನಿಗೆ ಧಾರೆಯೆರೆಯುತ್ತಿದ್ದರು. ಗುರುಶಿಷ್ಯರ ಸಂವಾದ ಉಪನಿಷತ್ತುಗಳಲ್ಲಿ ಹಲವೆಡೆ ಬರುತ್ತದೆ. ವೇದಗಳಲ್ಲೂ ಈ ರೀತಿ ಪರಸ್ಪರ ಸಂವಾದ ಮಾತುಕತೆ ಚರ್ಚೆಗಳ ನಿದರ್ಶನ ಹಲವೆಡೆ ಇವೆ. ಅಧ್ಯಾತ್ಮಕ್ಕೆ ಸಂಬಂಧಪಟ್ಟ ವಿಚಾರಗಳು ಮೌಖಿಕವಾಗಿ ಹೀಗೆ ಬಾಯಿಂದ ಬಾಯಿಗೆ ಹರಡುತ್ತಿದ್ದ ಆ ಶ್ರುತಿಗಳ ಕಾಲದಲ್ಲಿ ಈ ಮಾಧ್ಯಮ ಒಂದು ಶಿಸ್ತಿಗೆ ಒಳಪಟ್ಟಿತ್ತು. ಕೇಳಿದ್ದನ್ನು ಮನನ ಮಾಡಿಕೊಂಡು, ಬಾಯಿಪಾಠ ಮಾಡಿಕೊಂಡು, ಉಳಿಸಿಕೊಂಡು ಇನ್ನೊಬ್ಬರಿಗೆ ಹೇಳುವ ಈ ಪ್ರಕ್ರಿಯೆಯಲ್ಲಿ ಏನೂ ತಪ್ಪಾಗಬಾರದು ಎಂಬ ಕಾರಣಕ್ಕೆ ಪದಪಾಠ, ಘನಪಾಠ, ಜಟಾಪಾಠ ಇತ್ಯಾದಿ ವೇದಮೂಲ

ವನ್ನು ಬೇರೆ ಬೇರೆ ರೀತಿಯಲ್ಲಿ ಹೇಳುವ ಕ್ರಮಗಳನ್ನು ಬಳಕೆಗೆ ತಂದಿದ್ದರು. ಹೀಗಾಗಿ ವೇದಗಳ ಜ್ಞಾನರಾಶಿ ಯಥಾವತ್ತಾಗಿ ಇಂದಿನವರೆಗೂ ಉಳಿದುಬರಲು ಸಾಧ್ಯವಾಯಿತು.

'ಸಂವಾದ' ವೆನ್ನುವುದು ಸಂವಹನದ ಅಥವಾ ವಿಚಾರ ಪ್ರಸರಣ ಮಾಧ್ಯಮದ ಒಂದು ವಿಶಿಷ್ಟ ಸಮರ್ಥ ಪ್ರಯೋಗ. ಅರಿಸ್ಟಾಟಲ್, ಪ್ಲೇಟೋ ಅಂತಹ ಶ್ರೇಷ್ಠ ಗ್ರೀಕ್ ತತ್ತ್ವಜ್ಞಾನಿಗಳು ಬಳಸಿದ್ದು ಇದೇ ಮಾರ್ಗವನ್ನು. ಮಹಾಭಾರತದ ತುಂಬಾ ಇಂತಹ ಅರ್ಥಗರ್ಭಿತ ಸಂವಾದಗಳ ಹೊಳೆಗಳೇ ಹರಿಯುತ್ತಿವೆ.

ಮಾತುಕತೆಗೆ ಲಿಪಿ, ಬರೆಹಗಳ ಸಾಧನ ಬಂದೊದಗಿದ ಮೇಲೆ ಜ್ಞಾನಪ್ರಸಾರಕ್ಕೆ ಒಂದು ಹೊಸ ತಿರುವು ಮೂಡಿಬಂತು. ಸಂವಹನ ಇನ್ನೂ ಸಂವೃದ್ಧಿಗೊಂಡಿತು. ಬಹುಕಾಲ ಇಟ್ಟುಕೊಳ್ಳಬಹುದಾದ ಕಲ್ಲಿನ ಮೇಲೆ, ತಾಮ್ರಪಟಗಳ ಮೇಲೆ, ಓಲೆಗರಿಗಳ ಮೇಲೆ, ಇತ್ತೀಚೆಗೆ ಕಾಗದದ ಮೇಲೆ ಲಿಪಿಕಾರರು ಪ್ರತಿ ಮಾಡತೊಡಗಿದರು. ಹೀಗಾಗಿ ನೂರಾರು ಜನಗಳಿಗೆ ಅದು ತಲುಪುವಂತಾಯಿತು. ಕಲ್ಲುಬಂಡೆಗಳ ಮೇಲೆ ಕೆತ್ತಿದ ಶಿಲಾಶಾಸನಗಳು, ದೇವಾಲಯದ ಭಿತ್ತಿಗಳ ಮೇಲೆ ಕೆತ್ತಿದ ಚಿತ್ರಗಳು ಅಧ್ಯಾತ್ಮದ ಸಂದೇಶವನ್ನು ಚಿರಕಾಲ ಬಿತ್ತರಿಸುತ್ತವೆ. ಗ್ರಂಥಸ್ಥ ಅಧ್ಯಾತ್ಮ ವಿಚಾರಧಾರೆಗಳನ್ನು ಲಿಪಿಕಾರರು ಪ್ರತಿ ಮಾಡುವಾಗ ಎಚ್ಚರಿಕೆಯಿಂದ, ಶ್ರದ್ಧೆಯಿಂದ, ಮೂಲಕ್ಕೆ ಚ್ಯುತಿ ಬಾರದ ರೀತಿ ಬರೆದಿಟ್ಟುಕೊಳ್ಳುವ ಮೂಲಕ ಮುಂದಿನ ಜನಾಂಗಕ್ಕೆ ಮಹೋಪಕಾರ ಮಾಡಿದರು.

ಪತ್ರಿಕೆಗಳು, ಬಾನುಲಿ, ದೂರದರ್ಶನ ಮುಂತಾದ ಆಧುನಿಕ ಮಾಧ್ಯಮಗಳು ಕಾಲಿಟ್ಟ ಮೇಲೆ ಅಧ್ಯಾತ್ಮದ ಪ್ರಸಾರ ನಾಗಾಲೋಟದಿಂದ ಮುಂದುವರಿದಿದೆ. ಎಷ್ಟೋ ಬಾರಿ ಕಡಿವಾಣಕ್ಕೆ ಜಗ್ಗದ ಕುದುರೆಯೋಪಾದಿಯಲ್ಲಿ ಈ ಸವಾರಿ ಓಡುತ್ತಿದೆ. ಅಧ್ಯಾತ್ಮ ಪ್ರಸಾರಕ್ಕಾಗಿಯೇ ಮೀಸಲಾದ ಪತ್ರಿಕೆಗಳು, ಆಕಾಶವಾಣಿಯ ಕಾರ್ಯಕ್ರಮಗಳು, ದೂರದರ್ಶನದ ಚಾನೆಲ್‌ಗಳು ಹಲವಿವೆ. ದಿನಪತ್ರಿಕೆ, ವಾರ, ಮಾಸ, ವಾರ್ಷಿಕ, ವಿಶೇಷ ಸಂಚಿಕೆಗಳು – ಹೀಗೆ ಏನೇ ನಿಯತ ಅಥವಾ ಅನಿಯತಕಾಲಿಕಗಳಿರಲಿ, ಅವುಗಳಲ್ಲಿ ಅಧ್ಯಾತ್ಮಕ್ಕೆ ಸಂಬಂಧಪಟ್ಟ ವಿಚಾರಗಳ ಒಂದೆರಡಾದರೂ ಲೇಖನಗಳು ಇರುವುದು ಅತಿ ಸಾಮಾನ್ಯವಾಗಿಬಿಟ್ಟಿದೆ. ಓದುಗರು ಏನು ಬಯಸುತ್ತಾರೋ ಅದನ್ನೇ ಈ ಮಾಧ್ಯಮದವರು ಕೊಡುವ ಹಂಬಲದವರಾಗಿರುವುದರಿಂದ, ಅಧ್ಯಾತ್ಮ ವಿಚಾರಗಳ ಪ್ರಸರಣಕ್ಕೆ ಇಂದಿನ ಮಾಧ್ಯಮಗಳ ನೆರವು ತುಂಬಾ ಸಹಕಾರಿಯಾಗಿದೆ. ನಮ್ಮ 'ವಿವೇಕಪ್ರಭ' ವಂತೂ ಅಧ್ಯಾತ್ಮದ ಬಾಯಾರಿಕೆಯನ್ನು ಇಂಗಿಸಲು, ಹಸಿವನ್ನು ತಣಿಸಲು ತುಂಬ ಸಮರ್ಥವಾಗಿ ಕೆಲಸ ಮಾಡುತ್ತಿದೆ. ಇದಕ್ಕೆ ಸಂಬಂಧಪಟ್ಟವರೆಲ್ಲರೂ ಸ್ತುತ್ಯರು.

ಹೊಲದಲ್ಲಿ ಹೇರಳವಾಗಿ ಸಮೃದ್ಧಿಯಾಗಿ ಬೆಳೆ ಬರುತ್ತಿರುವಾಗ ಅಲ್ಲೊಂದು ಇಲ್ಲೊಂದು ಕಳೆ, ಕೊಳೆ ಇರುವುದು ಅಸಹಜವೇನಲ್ಲ. ಅಧ್ಯಾತ್ಮಕ್ಕೆ ಸಂಬಂಧಪಟ್ಟ ವಿಚಾರಗಳ ಬಗ್ಗೆ ಬರೆಯುವಾಗ ಸಾಕಷ್ಟು ಓದದೇ, ಸಾಕಷ್ಟು ತಿಳಿದುಕೊಳ್ಳದೆ, ತೋಚಿದ್ದನ್ನು ಬರೆದು, ಹೇಳಿ, ಅದೇ ಸರಿಯಿರಬಹುದು ಎಂಬ ಭ್ರಮೆಯನ್ನು ಮೂಡಿಸಿ, ಜನರನ್ನು ತಪ್ಪುದಾರಿಗೆ ಎಳೆಯುವ ಪ್ರವೃತ್ತಿ ಸಹ ಅಲ್ಲಲ್ಲಿ ಉಂಟು. ಅಬ್ಬರದ ಪ್ರಚಾರದ ಹಿನ್ನೆಲೆಯಲ್ಲಿ, ಈ ರೀತಿ ತಪ್ಪು ವಿಚಾರಗಳ ಪ್ರಸರಣದಿಂದ ಅಪಾಯವೂ ಇದೆ. ಆದರೆ ಒಳ್ಳೆಯ, ಸರಿಯಾದ ವಿಚಾರಧಾರೆಗಳು ಇಂಥ ದೋಷಪೂರಿತ, ಪೂರ್ವಾಗ್ರಹ ಪೀಡಿತ, ಸ್ವಕಪೋಲಕಲ್ಪನೆಗಳನ್ನು ಮೆಟ್ಟಿ, ಜೊಳ್ಳು ತೂರಿಹೋಗಿ, ಗಟ್ಟಿ ಮಾತ್ರ ಕೊನೆಯವರೆಗೂ ಉಳಿಯುತ್ತದೆ ಎಂದು ನಾನು ನಂಬುತ್ತೇನೆ. ಈ ದಿಶೆಯಲ್ಲಿ ನಮ್ಮ 'ವಿವೇಕಪ್ರಭ' ಪತ್ರಿಕೆ ಇನ್ನುಳಿದ ಇಂಥ ನಿಯತಕಾಲಿಕಗಳಿಗೆ ಮಾರ್ಗದರ್ಶಿಯಾಗಿ, ಮಾದರಿಯಾಗಿ, ಮಾನದಂಡವಾಗಿ ಚಿರಕಾಲ ನಿಲ್ಲಲಿ ಎಂದು ಹಾರೈಸುತ್ತೇನೆ.

## ಡಾ. ಎಚ್.ವಿ. ನಾಗರಾಜರಾವ್

*(ಸಂಸ್ಕೃತ ವಿದ್ವಾಂಸರಾದ ಶ್ರೀಯುತರು ದೇಶವಿದೇಶಗಳಲ್ಲಿ ಸಂಸ್ಕೃತವನ್ನು ಬೋಧಿಸಿದ್ದಾರೆ. ಇವರು ಮೈಸೂರಿನ ಪ್ರಾಚ್ಯ ವಿದ್ಯಾ ಸಂಶೋಧನಾ ಸಂಸ್ಥೆಯ ನಿವೃತ್ತ ಸಂಶೋಧಕರು.)*

ಅಧ್ಯಾತ್ಮ ಎಂಬ ಸಂಸ್ಕೃತ ಶಬ್ದಕ್ಕೆ **'ಆತ್ಮನಿ ಇತಿ ಅಧ್ಯಾತ್ಮಮ್'** ಎಂಬ ವಿಗ್ರಹವಾಕ್ಯದ ಆಧಾರದಿಂದ ಆತ್ಮವಿಷಯಕವಾದ ಚಿಂತನೆ, ಧ್ಯಾನ, ಜ್ಞಾನ ಎಂಬ ಅರ್ಥಗಳಿವೆ. 'ಆತ್ಮ' ಶಬ್ದಕ್ಕೆ ಉಪನಿಷತ್ತುಗಳಲ್ಲಿ 'ಜೀವಾತ್ಮ', 'ಪರಮಾತ್ಮ' ಎಂಬ ಎರಡು ಅರ್ಥಗಳು ಇವೆ. ಹೀಗೆ 'ನಾನಾರು?' ಎಂಬ ಪ್ರಶ್ನೆಗೆ ಉತ್ತರವನ್ನು ಹುಡುಕುವ ಗಂಭೀರ ಪ್ರಯತ್ನ, ಅದರ ಉತ್ತರವನ್ನು ಕಂಡುಕೊಂಡ ಮೇಲೆ ಆತ್ಮ–ಪರಮಾತ್ಮ ಸಂಬಂಧದ ಅನ್ವೇಷಣೆ ಇತ್ಯಾದಿಗಳೆಲ್ಲ 'ಅಧ್ಯಾತ್ಮ' ಎಂಬ ಶಬ್ದಾರ್ಥದ ಪರಿಧಿಯೊಳಗೆ ಬರುತ್ತವೆ.

'ಮಾಧ್ಯಮ' ಎಂಬ ಶಬ್ದ ಈಚಿನದು. ಇಂಗ್ಲೀಷಿನ medium ಎಂಬ ಶಬ್ದಕ್ಕೆ ಸಂವಾದಿಯಾಗಿ ಇದನ್ನು ಬಳಸುತ್ತಿದ್ದೇವೆ. 'ಮಧ್ಯಮ' ಎಂಬ ಶಬ್ದ ಸಂಸ್ಕೃತದಲ್ಲಿದೆ. ಅದಕ್ಕೆ 'ಅಣ್' ಪ್ರತ್ಯಯವನ್ನು ಜೋಡಿಸಿ 'ಮಾಧ್ಯಮ' ಶಬ್ದವನ್ನು ನಿಷ್ಪತ್ತಿ ಮಾಡಿಕೊಳ್ಳಬಹುದು. ನಾವಿರುವ ಯುಗವನ್ನು 'ಮಾಧ್ಯಮ ಯುಗ' ಎಂದು ಕರೆಯಬಹುದು. ಜೀವನದ ಪ್ರತಿಯೊಂದು ಅಂಗದ ಮತ್ತು ಪಾರ್ಶ್ವದ ಮೇಲೆ ಮಾಧ್ಯಮಗಳ ಪ್ರಭಾವ ಈಗ ಹೆಚ್ಚಾಗಿದೆ. ಬೆಳಗಾಗುತ್ತಿದ್ದಂತೆ ಜನರು ದಿನಪತ್ರಿಕೆಗಳ ಮೇಲೆ ಕಣ್ಣಾಡಿಸಿ ಬದುಕನ್ನು ಆರಂಭಿಸುತ್ತಾರೆ. ಬೆಳಗಿನ ಪತ್ರಿಕೆ ಸಿಕ್ಕದಿದ್ದರೆ ಏನೋ ಕಳೆದುಹೋದ ಹಾಗೆ ಭಾವಿಸುತ್ತಾರೆ. ಹಲವಾರು ಜನ ಆಕಾಶವಾಣಿಯಿಂದ ವಾರ್ತೆಗಳನ್ನು ಕೇಳುವುದೇ ದಿನದ ನಾಂದಿ ಎಂದುಕೊಳ್ಳುತ್ತಾರೆ. ಇತ್ತೀಚೆಗೆ ಬಂದಿರುವ ಟೆಲಿವಿಷನ್ ಇಡೀ ದಿನ ಜಗತ್ತಿನ ದರ್ಶನವನ್ನು ಮಾಡಿಸುತ್ತಾ ವ್ಯಾಖ್ಯಾನವನ್ನು ನೀಡುತ್ತಿರುತ್ತದೆ. ಮಿಕ್ಕ ಎಲ್ಲ ಕೆಲಸಗಳನ್ನು ಬಿಟ್ಟು ಕೆಲವರು ತಪಸ್ವಿಗಳಂತೆ ಏಕಚಿತ್ತರಾಗಿ ಈ ಪೆಟ್ಟಿಗೆಯ ಮುಂದೆ ಕುಳಿತಿರುತ್ತಾರೆ. ಇದೆಲ್ಲ ಅನಾವಶ್ಯಕ ಅವಾಂತರ, ಜನರಿಗೆ ಇದರಿಂದ ಅಪಾಯವೇ ಹೆಚ್ಚು ಎಂಬ ಟೀಕೆ ಟಿಪ್ಪಣಿಗಳಿದ್ದರೂ ಜನರು ಇದನ್ನೇ ಅವಲಂಬಿಸುತ್ತಿರುವುದು ದಿನೇ ದಿನೇ ಹೆಚ್ಚೇ ಆಗುತ್ತಿದೆ.

ಮಾಧ್ಯಮವು ಮಾಡಬೇಕಾದುದೇನು ಎಂಬ ಪ್ರಶ್ನೆಗೆ ಖಚಿತ ಉತ್ತರವಿಲ್ಲ. ವಾರ್ತಾಪತ್ರಿಕೆಗಳು ಮೊದಲು ವಾರ್ತೆಗಳನ್ನೇ ತಿಳಿಸುತ್ತಿದ್ದವಂತೆ. ಆಮೇಲೆ ವಾರ್ತೆಗಳ, ಮುಖ್ಯ ಘಟನೆಗಳ ಮೇಲೆ ಅಭಿಪ್ರಾಯಗಳನ್ನೂ ಅವು ಕೊಡಲಾರಂಭಿಸಿದುವು. ಅನಂತರ ಅಭಿಪ್ರಾಯಗಳನ್ನು ರೂಪಿಸಲು, ಕೆಲವು ಸಂದರ್ಭಗಳಲ್ಲಿ ಹೇರಲು ಪ್ರಯತ್ನಗಳು ನಡೆದುವು, ನಡೆಯುತ್ತಿವೆ. ಸಾಹಿತ್ಯದ ಪ್ರೋತ್ಸಾಹ, ಅಭಿರುಚಿಯ ನಿರ್ಮಾಣ ಮುಂತಾದುವೂ ಮಾಧ್ಯಮಗಳ ಕರ್ತವ್ಯವಾಯಿತು. ಮನೋರಂಜನೆಗಾಗಿ ಕಥೆ, ಕಾದಂಬರಿ, ಹಾಸ್ಯ ಮುಂತಾದ ಅಂಕಣಗಳು ಆರಂಭಗೊಂಡವು. ರೇಡಿಯೋದಲ್ಲಿ ಸಂಗೀತ ಮತ್ತು ನಾಟಕಗಳಿಗಾಗಿ ಕಾಲವನ್ನು ಮೀಸಲಾಗಿರಿಸಲಾಯಿತು. ಟೆಲಿವಿಷನ್ ಒಂದು ವಾಹಿನಿಯಿಂದ ಆರಂಭಗೊಂಡು ಈಗ ನೂರಾರು ವಾಹಿನಿಗಳನ್ನು ಹೊಂದಿದೆ.

ಮಾಧ್ಯಮಗಳು ಎಲ್ಲ ಜನರನ್ನೂ ತಲುಪಲು ಅಪೇಕ್ಷಿಸುತ್ತವೆ. ಜನರಿಗೆ ಏನು ಬೇಕೋ ಅದನ್ನು ಕೊಟ್ಟರೆ ಮಾತ್ರ ಅವು ಉಳಿಯಲು, ಬೆಳೆಯಲು ಸಾಧ್ಯ. ಕ್ರೀಡೆಗಳು ನೂರಾರು ಇದ್ದರೂ ಜನರಿಗೆ ಕ್ರಿಕೆಟ್ ನೋಡುವ ಹುಚ್ಚು ಎಂದು ಅದಕ್ಕೇ ಎಲ್ಲ ವಾಹಿನಿಗಳೂ ಪ್ರಾಧಾನ್ಯವನ್ನು ಕೊಡುತ್ತವೆ, ಎಲ್ಲ ಪತ್ರಿಕೆಗಳಲ್ಲೂ ಅದಕ್ಕೇ ಸಿಂಹಪಾಲು ಸಿಕ್ಕುತ್ತದೆ. ಜನಸಮೂಹದ ಎಲ್ಲ ವರ್ಗಗಳ ಅಪೇಕ್ಷೆಗಳನ್ನು ಪೂರೈಸುವ ಅಥವಾ ಪೂರೈಸಲು ಪ್ರಯತ್ನಿಸುವ ಮಾಧ್ಯಮಗಳು ಅಧ್ಯಾತ್ಮದ ಬಗೆಗೆ ಯಾವ ನಿಲುವನ್ನು ತಾಳಿವೆ ಎಂಬುದು ನಮ್ಮ ಮುಂದಿರುವ ಪ್ರಶ್ನೆ.

ಹಲವು ವಾರ್ತಾಪತ್ರಿಕೆಗಳು ಮತ್ತು ವಾರಪತ್ರಿಕೆಗಳು ಈ ಕ್ಷೇತ್ರಕ್ಕೂ ಗಮನವನ್ನಿತ್ತಿವೆ. ನಿಯಮಿತವಾಗಿ ಸ್ವಲ್ಪ ಸ್ಥಳವನ್ನು ಅವು ಆಧ್ಯಾತ್ಮಿಕ ವಿಷಯಗಳಿಗಾಗಿ ಮೀಸಲಾಗಿಟ್ಟಿವೆ. 'ದಿ ಹಿಂದೂ' ಪತ್ರಿಕೆಯು ಈ ಸಂಪ್ರದಾಯವನ್ನು ಬಹಳ ಕಾಲದಿಂದ ಕಾಪಾಡಿಕೊಂಡು ಬರುತ್ತಿದೆ. ಅಧ್ಯಾತ್ಮವನ್ನೇ ಪ್ರಧಾನ ವಿಷಯವನ್ನಾಗಿ ಇಟ್ಟುಕೊಂಡಿರುವ ಪತ್ರಿಕೆಗಳೂ ಬಹಳ ಇವೆ.

ದೃಶ್ಯ ಶ್ರವ್ಯ ಮಾಧ್ಯಮವಾದ 'ಟೆಲಿವಿಷನ್' ಕೂಡ ಅಧ್ಯಾತ್ಮಕ್ಕೆ ಸಾಕಷ್ಟು ಸ್ಥಾನವನ್ನು ಕೊಟ್ಟಿದೆ ಎಂದು ನನ್ನ ಅಭಿಪ್ರಾಯ. ಬೆಳಗಿನ ಸಮಯದಲ್ಲಿ ಅಧ್ಯಾತ್ಮ ಜಿಜ್ಞಾಸುಗಳು ಹಲವಾರು ವಾಹಿನಿಗಳಲ್ಲಿ ಆಧ್ಯಾತ್ಮಿಕ ಉಪದೇಶಗಳನ್ನು ಕೇಳಬಹುದು. ಜ್ಞಾನಿಗಳು ವಿಶೇಷವಾಗಿ ನಿಯತಕಾಲದಲ್ಲಿ ಹೇಳಲು ಸಾಧ್ಯವಾಗುವ ವಿಚಾರಗಳನ್ನು ಸಿದ್ಧಪಡಿಸಿಕೊಂಡು, ಹೃದಯಂಗಮ ಶೈಲಿಯಲ್ಲಿ ಪ್ರತಿಪಾದಿಸುವ ರೀತಿ ಅದ್ಭುತವಾಗಿದೆ. ಬೇರೆ ಬೇರೆ ಭಾಷೆಗಳಲ್ಲಿ ವಿದ್ವಾಂಸರು ಅನೇಕ ವರ್ಷಗಳ ಅಧ್ಯಯನ ಮತ್ತು ಸಾಧನೆಗಳಿಂದ ಕರಗತವಾದ ವಿಚಾರಗಳನ್ನು ಸಾಮಾನ್ಯರೂ ಅರಿತುಕೊಳ್ಳಲು ಆಗುವಂತೆ ವಿವರಿಸುತ್ತಾರೆ. ಹಲವು ಬಾರಿ ಪ್ರಶ್ನೋತ್ತರ ರೂಪದಲ್ಲೂ ಈ ಕಾರ್ಯಕ್ರಮಗಳು ಬಿತ್ತರವಾಗುತ್ತವೆ.

ಸಂಪೂರ್ಣ ಆಧ್ಯಾತ್ಮಿಕ ವಾಹಿನಿಗಳೂ ಹಲವಾರು ಇವೆ. **ಆಸ್ಥಾ, ಸಂಸ್ಕಾರ್** ಇತ್ಯಾದಿಗಳು ಸಂಪೂರ್ಣ ಸಮಯವನ್ನು ಅಧ್ಯಾತ್ಮಕ್ಕಾಗಿಯೇ ಮೀಸಲಾಗಿಟ್ಟಿವೆ. ಯೋಗ, ಧ್ಯಾನ, ಪ್ರಾಣಾಯಾಮ ಮುಂತಾದುವನ್ನು ಬೋಧಿಸುವುದರಲ್ಲಿ ಇವು ಮುಖ್ಯ ಪಾತ್ರವನ್ನು ವಹಿಸಿವೆ. ವೀಕ್ಷಕರು ಉಪನ್ಯಾಸಕಾರರನ್ನು ದೂರವಾಣಿಯ ಮೂಲಕ ಸಂಪರ್ಕಿಸಿ, ಪ್ರಶ್ನೆಗಳನ್ನು ಕೇಳಿ ಪರಿಹಾರವನ್ನು ಪಡೆದುಕೊಳ್ಳುವ ಅವಕಾಶವನ್ನೂ ವಾಹಿನಿಗಳು ಕಲ್ಪಿಸಿಕೊಟ್ಟಿರುವುದು ಜಿಜ್ಞಾಸುಗಳಿಗೆ ಅತ್ಯಂತ ಉಪಕಾರಕವಾಗಿದೆ.

ಆಧ್ಯಾತ್ಮಿಕ ಕಾರ್ಯಕ್ರಮಗಳಿಗೆ ಸಾಮಾನ್ಯವಾಗಿ ಪ್ರಾಯೋಜಕರಿರುವುದಿಲ್ಲ. ಆರ್ಥಿಕ ಲಾಭವಿಲ್ಲದಿದ್ದರೂ ವಾಹಿನಿಗಳು ಇವುಗಳನ್ನು ಬಿತ್ತರಿಸುತ್ತಿರುವುದು ಶ್ಲಾಘನೀಯ. ಅಧ್ಯಾತ್ಮ ಸಂಬಂಧಿ ಲೇಖನಗಳನ್ನು ಪತ್ರಿಕೆಗಳು ಪ್ರಕಟಿಸಿದರೂ, ಅಂಥ ಕಾರ್ಯಕ್ರಮಗಳನ್ನು ಟಿ.ವಿ. ವಾಹಿನಿಗಳು ಬಿತ್ತರಿಸಿದರೂ ಎಷ್ಟು ಜನ ತಾನೆ ಓದುತ್ತಾರೆ ಅಥವಾ ನೋಡುತ್ತಾರೆ? ನೋಡಿದವರಲ್ಲೂ ಎಷ್ಟು ಜನ ತಾನೆ ಅರ್ಥ ಮಾಡಿಕೊಂಡು ಅನುಸರಿಸಿ ಪ್ರಯೋಜನ ಪಡೆದುಕೊಳ್ಳುತ್ತಾರೆ? ಇದು ಬೇರೆ ವಿಷಯ.

ಕಠೋಪನಿಷತ್ತಿನಲ್ಲಿ ಹೇಳಿರುವಂತೆ ಅಧ್ಯಾತ್ಮವನ್ನು ಅರಿತುಕೊಳ್ಳುವವರು ಅಂದು ಇಂದೂ ಎಂದೂ ವಿರಳವೇ. ಮಾಧ್ಯಮಗಳು ಬಿತ್ತರಿಸುವ ಹಲವು ಹತ್ತು ಅಬ್ಬರದ, ಅಟ್ಟಹಾಸದ, ಹಿಂಸಾತ್ಮಕ, ಶೃಂಗಾರರಸಭರಿತ ಕಾರ್ಯಕ್ರಮಗಳ ಮಧ್ಯೆ ಮರಳುಗಾಡಿನಲ್ಲಿ ಸುರಿದ ಮಳೆ ಹನಿಯಂತೆ ಅಧ್ಯಾತ್ಮವು ಎಲ್ಲಿ ಮಾಯವಾಗುವುದೋ ಎಂಬ ಸಂಶಯ ಇದ್ದೇ ಇದೆ. ಆದರೆ ಯಾರಿಗೂ ಮೂಗನ್ನು ಒತ್ತಿ ಅಧ್ಯಾತ್ಮದ ಅಮೃತವನ್ನು ಕುಡಿಸುವುದು ಸಾಧ್ಯವಿಲ್ಲ, ಅದು ಸಾಧುವೂ ಅಲ್ಲ.

ಅಧ್ಯಾತ್ಮ ಕಾರ್ಯಕ್ರಮಗಳು ಹೆಚ್ಚು ಜನಪ್ರಿಯವಾಗಬೇಕಾದರೆ, ಮಾಧ್ಯಮಗಳಲ್ಲಿ ಅಧ್ಯಾತ್ಮಕ್ಕೆ ಹೆಚ್ಚು ಅವಕಾಶ ಸಿಕ್ಕಬೇಕಾದರೆ ಅದನ್ನು ಉಪದೇಶಿಸುವವರು ಜನರಿಗೆ ಹಿಡಿಸುವಂತೆ ಆ ವಿಷಯಗಳನ್ನು ನಿರೂಪಿಸಬಲ್ಲವರಾಗಿರಬೇಕು. ವೇದಾಂತ ಎಂದು ಹೇಳಿದ ತತ್‌ಕ್ಷಣ ಜನರು, "ಇದೊಂದು ಒಣ ವಿಚಾರ. ಅರ್ಥವಾಗದ ಶಬ್ದರಾಶಿ. ಜೀವನದಲ್ಲಿ ಅನುಷ್ಠಾನಗೊಳಿಸಲಾಗದ ತತ್ತ್ವಗಳನ್ನು ಕೇಳಿ ಏನು ಪ್ರಯೋಜನ?" ಎಂದು ಹೇಳಿಬಿಡುತ್ತಾರೆ. ಅಧ್ಯಾತ್ಮಕ್ಕೆ ಸಂಬಂಧಿಸಿದ ಶಾಸ್ತ್ರಗಳು ನಮ್ಮಲ್ಲಿ ಗಹನವಾಗಿ ಬೆಳೆದಿವೆ. ಅವುಗಳಲ್ಲಿ ಅಪಾರ ಪಾರಿಭಾಷಿಕ ಪದಗಳಿವೆ. ಅವುಗಳು ಪಂಡಿತರಿಗೆ ಮಾತ್ರ ಅರ್ಥವಾಗುತ್ತವೆ. ಸಾಮಾನ್ಯ ಮನುಷ್ಯರಿಗೆ ಅವು ಅರ್ಥಶೂನ್ಯವಾಗಿ ನಿಲ್ಲುತ್ತವೆ. ಪತ್ರಿಕೆಯಲ್ಲಿ ಅಂಥ ಪ್ರೌಢ ಲೇಖನ ಬಂದರೆ ಯಾರೂ ಓದುವುದೇ ಇಲ್ಲ. ಧರ್ಮಕೀರ್ತಿ ಎಂಬ ಬೌದ್ಧ ಪಂಡಿತನಿಗೆ ಸುಮಾರು ಆರನೆಯ ಶತಮಾನದಲ್ಲೇ ಅಂಥ ಪರಿಸ್ಥಿತಿ ಒದಗಿತ್ತು. ಅವನು ಹೇಳುತ್ತಾನೆ:

ಅನಧ್ಯವಸಿತಾವಗಾಹನಮನಲ್ಪಧೀಶಕ್ತಿನಾ–  
ಪ್ಯದೃಷ್ಟ ಪರಮಾರ್ಥತತ್ತ್ವಮಧಿಕಾಭಿಯೋಗೈರಪಿ ।  
ಮತಂ ಮಮ ಜಗತ್ಯಲಬ್ಧಸದೃಶಪ್ರತಿಗ್ರಾಹಕಂ  
ಪ್ರಯಾಸ್ಯತಿ ಪಯೋನಿಧೇಃ ಪಯ ಇವ ಸ್ವದೇಹೇ ಜರಾಮ್ ॥

"ಬುದ್ಧಿವಂತರೂ ನನ್ನ ಸಿದ್ಧಾಂತವನ್ನು ಅರ್ಥಮಾಡಿಕೊಳ್ಳ ಲಾಗಲಿಲ್ಲ. ಅಧಿಕ ಪ್ರಯತ್ನಪಟ್ಟವರಿಗೂ ನನ್ನ ಪರಮಾರ್ಥ ತತ್ತ್ವ ತಿಳಿಯಲಾಗಲಿಲ್ಲ. ಯೋಗ್ಯ ಗ್ರಾಹಕರಿಲ್ಲದ ನನ್ನ ಮತ ಸಮುದ್ರದ ನೀರಿನಂತೆ ನನ್ನ ದೇಹದಲ್ಲೇ ಕೊನೆಯನ್ನು ಕಂಡಿತು, ಅಷ್ಟೇ".

ಹೀಗೆ ಅವನು ಮರುಗಿದನಂತೆ. ಹೀಗಾಗಬಾರದು. ಅಧ್ಯಾತ್ಮದ ಬೋಧನೆಯ ಸಾರ, ಸಾಮಾನ್ಯ ಜನರಿಗೂ ತಿಳಿಯಬೇಕು. ಅದನ್ನು ತಿಳಿಸುವ ಕ್ರಮದಲ್ಲೂ ನಾವೀನ್ಯವಿರಬೇಕು, ಸ್ವಾರಸ್ಯವಿರಬೇಕು, ಬೇಸರ ತರಿಸುವಂತೆ ಇರಬಾರದು. ಏಕೆಂದರೆ ಮಾಧ್ಯಮಗಳಲ್ಲಿ ಸಮಯದ ಬೆಲೆ ಹೆಚ್ಚು. ಒಂದು ಕ್ಷಣವನ್ನೂ ಅಲ್ಲಿ ವ್ಯರ್ಥ ಮಾಡುವ ಹಾಗಿಲ್ಲ. ಎಷ್ಟು ಹೆಚ್ಚು ಜನ ಕಾರ್ಯಕ್ರಮವನ್ನು ನೋಡುತ್ತಾರೆ ಎಂಬುದರ ಮೇಲೆ ಕಾರ್ಯಕ್ರಮಕ್ಕೆ ಅವಕಾಶ ಸಿಕ್ಕುತ್ತದೆ. ಹಾಗೆಂದು ಕಾರ್ಯಕ್ರಮವನ್ನು ನಗೆಹೊನಲನ್ನಾಗಿ ಪರಿವರ್ತಿಸಬಾರದು. ಪ್ರತಿಪಾದನೆಯಲ್ಲಿ ಹಾಸ್ಯವಿರುವುದು ತಪ್ಪಲ್ಲ. ಆದರೆ ಹಾಸ್ಯವೇ ಪ್ರಧಾನವಾಗಬಾರದು. ಅದೇ ಪ್ರಧಾನವಾದರೆ ಜನರ ಮನಸ್ಸೆಲ್ಲ ಅಲ್ಲೇ ನಿಂತು ಅಧ್ಯಾತ್ಮ ಮರೆತೇ ಹೋಗುತ್ತದೆ. ಇವರ ಭಾಷಣ ಚೆನ್ನಾಗಿರುತ್ತದೆ, ತುಂಬ ಜೋಕುಗಳನ್ನು ಹೇಳುತ್ತಾರೆ ಎಂದು ಜನರು ಅಂದುಕೊಳ್ಳುವಂತಾಗಬಾರದು. Entertainment ಬೇರೆ, Enlightenment ಬೇರೆ. ಅಧ್ಯಾತ್ಮ ಕಾರ್ಯಕ್ರಮಗಳು ಹೆಚ್ಚು ಜನರನ್ನು ಏಕೆ ಆಕರ್ಷಿಸುತ್ತಿಲ್ಲ ಎಂಬ ಪ್ರಶ್ನೆಗೆ ಮತ್ತೊಂದು ಮಗ್ಗುಲಿನ ಉತ್ತರವೂ ಇದೆ. ಅಧ್ಯಾತ್ಮವನ್ನು ಹೇಳುವವರು ಅನುಭವದ ಆಧಾರದಿಂದ ಏನನ್ನಾದರೂ ಹೇಳಿದಾಗ ಜನರು ಕೇಳುತ್ತಾರೆ. ಅನುಭವವಿಲ್ಲದೆ ಕೇವಲ ಪುಸ್ತಕ ಅಧ್ಯಯನದಿಂದ ಹೇಳುವುದು ಮಾತಿನ ಚಾತುರ್ಯವೆನಿಸಬಹುದಷ್ಟೆ. ಅದು ಪರಿಣಾಮಕಾರಿಯಾಗಿ ಸಫಲವಾಗುವುದಿಲ್ಲ.

## ಡಾ. ಹೆಚ್. ರಾಮಚಂದ್ರ ಸ್ವಾಮಿ

*(ನಿವೃತ್ತ ಕಾಲೇಜು ಪ್ರಾಧ್ಯಾಪಕರಾಗಿರುವ ಲೇಖಕರು ಅನೇಕ ಪುಸ್ತಕಗಳನ್ನು ರಚಿಸಿದ್ದಾರೆ ಮತ್ತು ಅನುವಾದಿಸಿದ್ದಾರೆ. ಇವರ ಅನೇಕ ಲೇಖನಗಳು ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ. )*

**ಭಾ**ರತದ ಸಹಜ ಪ್ರವೃತ್ತಿಯೇ ಆಧ್ಯಾತ್ಮಿಕ ಜೀವನ. ಭಾರತೀಯರಿಗೆ ಋಷಿಗಳೆಂದರೆ, ಮಹಾತ್ಮರೆಂದರೆ ಒಲವು, ಗೌರವ. ಕಾಲಕಾಲಕ್ಕೆ ಆಧ್ಯಾತ್ಮಿಕ ಉನ್ನತಿಯನ್ನು ಸಾಧಿಸಿದ ಮಹಾತ್ಮರು ಇಲ್ಲಿ ಹುಟ್ಟಿಬರುತ್ತಲೇ ಇದ್ದಾರೆ. ಶ್ರೀರಾಮಕೃಷ್ಣರು ಅಂತಹ ಒಬ್ಬ ಋಷಿ, ನಿರಂತರ ಆಧ್ಯಾತ್ಮಿಕ ಜ್ಯೋತಿ ಅವರು. ವೇದಗಳ ಕಾಲದಿಂದಲೂ ಹರಿದು ಬಂದಿರುವ ಅನುಭಾವ ಪರಂಪರೆಗೆ ಅವರು ಇತ್ತೀಚಿನ ಉತ್ತಮ ಉದಾಹರಣೆ.

ಅಧ್ಯಾತ್ಮ ಎಂದರೆ 'ಅನುಭಾವ' – direct experience. ಅನುಭೂತಿ ಎಂದರೆ ನಮ್ಮ ಬೌದ್ಧಿಕತೆಗೆ ಆಗುವ ಹೊಸ ಸೇರ್ಪಡೆಯಲ್ಲ; ಹೃದಯದ ವೈಶಾಲ್ಯ, ಭಾವನೆಯ ವಿಸ್ತರಣ, ಇಡೀ ವಿಶ್ವವನ್ನೇ ಒಳಗೊಂಡ ಸತ್ಯದರ್ಶನ. ವೈಚಾರಿಕತೆಯನ್ನು ಮೀರಿದ, ಅನಿರೀಕ್ಷಿತವಾಗಿ ಬಂದೊದಗುವ, ಕಾಣದ ಕೈಯ ನೆರವು. ಇದೊಂದು ಅಚ್ಚರಿಯ ಅನುಭವ. ಇದರ ಎದುರು ನಮ್ಮ ಅಹಂಕಾರ ನುಚ್ಚುನೂರಾಗುತ್ತದೆ; ಜೀವ ಮಾಗಿ, ಬಾಗುತ್ತದೆ. ನಾವು 'ನಮೋ' ಎನ್ನುವುದು, ಪೂಜಿಸುವುದು, ಪ್ರೀತಿಸುವುದು, ಇದನ್ನೇ.

ಇದು ತಂತಾನೆ ಬರುವುದಿಲ್ಲ. ಇದಕ್ಕೆ ಪುರುಷಪ್ರಯತ್ನ ಅತ್ಯಗತ್ಯ. ನಮ್ಮ ಪ್ರಯತ್ನದಲ್ಲಿ ಗೆಲ್ಲುವುದಕ್ಕಿಂತ ಸೋಲುವುದೇ ಹೆಚ್ಚು. ನಮ್ಮಿಂದಾದಷ್ಟೂ ಪ್ರಯತ್ನಿಸಿ ಇನ್ನು ಸಾಧ್ಯವೇ ಇಲ್ಲವೆಂದು ಹತಾಶರಾದಾಗ, ಇನ್ನು ಕಣ್ಣುಮುಚ್ಚುವುದೊಂದೇ ಬಾಕಿ ಎನ್ನಿಸಿಬಿಟ್ಟಾಗ, ಕೈ ಹಿಡಿದೆತ್ತುವ ಈ ನೆರವು ಮೂಡಿ ಬರುತ್ತದೆ. ಆಗ ನಮ್ಮ ಜೀವ ಧನ್ಯತೆ ಮತ್ತು ಕೃತಜ್ಞತೆಗಳಿಂದ ತುಂಬಿಹೋಗುತ್ತದೆ. ಪೂರ್ಣಜ್ಞಾನ ಲಭಿಸುವವರೆಗೂ ಮೇಲೇಳುವುದಿಲ್ಲ ಎಂದು ಪಟ್ಟುಹಿಡಿದು ಕುಳಿತಾಗ ಬುದ್ಧನಿಗೆ, ತಾಯಿಯ ದರ್ಶನವಾಗಲಿಲ್ಲವೆಂದು ಹತಾಶರಾಗಿ ತಮ್ಮನ್ನೇ ತಾವು ಕಾಳಿಗೆ ಬಲಿ ಕೊಡಲು ಚಂದ್ರಾಯುಧವನ್ನು ಕೈಗೆತ್ತಿಕೊಂಡಾಗ ಶ್ರೀರಾಮಕೃಷ್ಣರಿಗೆ, ಈ ರೀತಿಯ ಅನುಭವವಾಯಿತು.

ಇಂತಹ ಆಧ್ಯಾತ್ಮಿಕ ಅನುಭಾವ ವೈಚಾರಿಕತೆಯನ್ನು ಮೀರಿದ್ದಾದರೂ, ವಿಚಾರವಿರೋಧಿ ಅಲ್ಲ. ಆತ್ಮಸಾಕ್ಷಾತ್ಕಾರದ ಪ್ರತ್ಯಕ್ಷಾನುಭವವನ್ನು ಒತ್ತಿ ಹೇಳುವುದರ ಜೊತೆಜೊತೆಗೇ ಉಪನಿಷತ್ತುಗಳು ಈ ಸತ್ಯದ ಆವಿಷ್ಕರಣದ ಆವಶ್ಯಕತೆಯನ್ನು ಸಮರ್ಥಿಸಲು ಕಾರಣಗಳನ್ನೂ ಕೊಡುತ್ತವೆ; ನಮ್ಮ ಕಾಲದಲ್ಲಿ ಶ್ರೀರಾಮಕೃಷ್ಣರು ಇದಕ್ಕೆ ಅನೇಕ ಸಾಮತಿಗಳನ್ನೂ ಕೊಟ್ಟಿದ್ದಾರೆ. ಅಧ್ಯಾತ್ಮದ ವೇಷ ಕಟ್ಟುವುದರ ನಿರರ್ಥಕತೆಯನ್ನು ಎತ್ತಿ ತೋರಿಸುವುದಕ್ಕೆ 'ಹಾಜರಾ' ನಂಥವನ ಉದಾಹರಣೆಯನ್ನು ಶ್ರೀರಾಮಕೃಷ್ಣ ವಚನವೇದದಲ್ಲಿ ನೋಡಬಹುದು.

ಈ ಆಧ್ಯಾತ್ಮಿಕ ಅನುಭವವನ್ನು ಮಾಧ್ಯಮದ ಮೂಲಕ ಸಂವಹನೆ ಮಾಡುವುದು ಸಾಧ್ಯವೆ? ಸಾಧ್ಯವಿಲ್ಲ ಎಂದೇ ನನ್ನ ಅನಿಸಿಕೆ. 'ಹಿಂದೂ' ಪತ್ರಿಕೆಯಲ್ಲಿ ಅರ್ಧ ಕಾಲಂನಷ್ಟು ಬರುವ ಧಾರ್ಮಿಕ ಕಾರ್ಯಕ್ರಮಗಳ, ಉಪನ್ಯಾಸಗಳ ವರದಿಗಳು, 'ಉದಯವಾಣಿ' ಪತ್ರಿಕೆಯವರು ಕೆಲಕಾಲದಿಂದ ಪ್ರಕಟಿಸುತ್ತ ಬಂದಿರುವ ಲೇಖನಗಳು – ಇವೆಲ್ಲ ಅಧ್ಯಾತ್ಮಕ್ಕೆ ಸಂಬಂಧಪಟ್ಟವೇ ಹೊರತು ಅವೇ ಅಧ್ಯಾತ್ಮವಲ್ಲ.

ಆದರೆ ಅಧ್ಯಾತ್ಮದ ಅನುಭಾವ, ಸತ್ಯದ ದಿವ್ಯದರ್ಶನ, ನಮಗೆ ಬೇಡವೆ? ಖಂಡಿತ ಬೇಕು. ಮನುಷ್ಯಜೀವನದ ಗುರಿಯೇ ಅದು. ಅದನ್ನು ಒಬ್ಬರು ಇನ್ನೊಬ್ಬರಿಗೆ ಕೊಡುವುದಕ್ಕಾಗದೆ ಇದ್ದರೆ, ಮಾರ್ಗದರ್ಶನವನ್ನಾದರೂ ಮಾಡಬಹುದಲ್ಲ? 'ಪ್ರಬುದ್ಧ ಭಾರತ', 'ವೇದಾಂತ ಕೇಸರಿ', 'ವಿವೇಕಪ್ರಭ' ಮುಂತಾದ ರಾಮಕೃಷ್ಣ ಮಹಾಸಂಘದ ಪತ್ರಿಕೆಗಳು ಮಾಡುತ್ತಿರುವುದು ಇದೇ ಕೆಲಸವನ್ನು.

ಸತ್ಯದ ಶ್ರೇಣಿಯಲ್ಲಿ ಒಂದೊಂದೂ ನಮಗೆ ಗೊತ್ತಾಗುವುದು

ನಾವು ಅದಕ್ಕಿಂತ ಎತ್ತರದ ನೆಲೆಯಲ್ಲಿ ನಿಂತಾಗ ಮಾತ್ರ. ಹುಟ್ಟಿ ಬರುವಾಗ ನಾವು ತಂದಿರುವುದು ಕೇವಲ ಶರೀರವನ್ನು ಮತ್ತು ಅದರ ವಾಂಛೆಗಳನ್ನು. ಜೊತೆಗೆ ಮಿದುಳೆಂಬ ಯಂತ್ರಕ್ಕೆ ಸ್ವಲ್ಪ ಕೀ ಕೊಟ್ಟು, ಸುತ್ತಲಿನದನ್ನು ಗ್ರಹಿಸಿ ಬೆಳವಣಿಗೆ ಪ್ರಾರಂಭವಾಗುವಂತೆ ಮಾಡಿ, ಗೊಂಬೆ ಏನೆಲ್ಲ ಮಾಡುತ್ತದೆ ಎಂದು ನಮ್ಮ ಹಿಂದೆಯೇ ನಿಂತು ಕುತೂಹಲದಿಂದ ಗಮನಿಸುತ್ತಿರುತ್ತಾನೆ ಭಗವಂತ. ಇದನ್ನೇ ಅವನ ಲೀಲೆ ಎನ್ನುವುದು. ಮಹಾವಿಷ್ಣು ಆದಿಶೇಷನ ಮೇಲೆ ಮಲಗಿರುವ ಹಾಗೆ, ಚೇತನದ ಕುಂಡಲಿನಿ ಸ್ವಸ್ಥವಾಗಿ ಮೂಲಾಧಾರದಲ್ಲಿ ಮಲಗಿರುತ್ತದೆ. ಇಲ್ಲಿಂದ ಮೇಲೇರುವುದೇ ಮಾನವನ ಸಾಧನೆ. 'ಅನ್ನಮಯ' ಅರ್ಥವಾಗುವುದು 'ಪ್ರಾಣಮಯ'ಕ್ಕೇರಿದಾಗ; 'ಪ್ರಾಣಮಯ'ದ ಪರಿಮಿತಿಗಳು ಗೊತ್ತಾಗುವುದು 'ಮನೋಮಯ' ಕ್ಕೇರಿದಾಗ. 'ಮನೋಮಯ'ದ ಮಂಗನನ್ನು ಹಗಲುಗನಸು ಕಾಣಲು ಬಿಡದೆ ಶಿಸ್ತಿಗೆ ಒಳಪಡಿಸಲು ಸಾಧ್ಯವಾಗುವುದು 'ವಿಜ್ಞಾನಮಯ' ಕ್ಕೇರಿದಾಗ. ಈ ವಿಜ್ಞಾನಮಯದ ಸಾಧನೆಯ ಧನ್ಯತೆ ನಮಗೆ ಅರ್ಥ ವಾಗುವುದು 'ಆನಂದಮಯ'ಕ್ಕೇರಿದಾಗಲೇ. ಈ ವಿಶ್ವವಾಹಿನಿಯ ಅಂತರಾಳದಲ್ಲಿ ಒಂದು ಮೂಲಸ್ವಭಾವ ಇದೆ – ಯಾವುದೇ ನಿಲುವಿನಿಂದ ಪರಿಪೂರ್ಣತೆಯ ಕಡೆಗೆ ಸಾಗುವುದಕ್ಕೆ ಸ್ಪಷ್ಟವಾದ ನಿರ್ದೇಶನವಿದೆ. ಇದನ್ನು ಖಚಿತವಾಗಿ ಪ್ರಸ್ತುತಪಡಿಸುವುದೇ ಮಾಧ್ಯಮದ ಕೆಲಸ.

**ಮಾಧ್ಯಮ ಎಂದರೇನು? ಅರಿವೇ ಬೆಳಕು ಎಂದರಿತು, ತಿಳಿದವರು ತಿಳಿಯದವರಿಗೆ ತಿಳಿವನ್ನು ತಿಳಿಸಿಕೊಡಲು ಮಾಡಿಕೊಂಡಿರುವ ಏರ್ಪಾಟು**. ದುರದೃಷ್ಟವೆಂದರೆ, ಈಗ ಮಾಧ್ಯಮಗಳಲ್ಲಿ ಕ್ರೌರ್ಯ, ಹಿಂಸೆ, ಮೋಸ, ದರೋಡೆ, ಕೊಲೆ ಅವಘಡ, ಅತ್ಯಾಚಾರ, ರಾಜಕೀಯ, ನೀಚತನ ಇತ್ಯಾದಿ ರೋಚಕ ವರದಿಗಳೇ ತುಂಬಿ ತುಳುಕುತ್ತಿರುವುದು. ಮುಖ್ಯಮಂತ್ರಿಯೊಬ್ಬರ ಹುಟ್ಟುಹಬ್ಬದ ಆಚರಣೆಗೆ ಸಾವಿರ ಕೋಟಿ ರೂಪಾಯಿ ಹಣ ಸಂಗ್ರಹವಂತೆ, ಕೊಡದೆ ಇದ್ದವರನ್ನು ಕೊಲೆ ಮಾಡಿದರಂತೆ! ಭಾರತದ ಸಹಜ ಪ್ರವೃತ್ತಿಯೇ ಆಧ್ಯಾತ್ಮಿಕ ಜೀವನ ಎಂದು ಈ ಮೊದಲು ಹೇಳಿದ್ದಕ್ಕೆ ನನಗೀಗ ಪಶ್ಚಾತ್ತಾಪವಾಗುತ್ತಿದೆ.

ಇದು ಮಾಧ್ಯಮದ ತಪ್ಪಲ್ಲ. ಮಾಧ್ಯಮದ ಸರಿಯಾದ ಬಳಕೆ ಮಾಡುವ ಜವಾಬ್ದಾರಿಯನ್ನು ಹೊತ್ತಿರುವವರ ತಪ್ಪು. ಟಿ.ವಿ. ಯವರನ್ನು ಕೇಳಿದರೆ, ಯಾವ ತರಹದ ಧಾರಾವಾಹಿ ಹಾಕಿದರೆ ಜನರಿಗೆ ರುಚಿಸುತ್ತದೆಯೋ, ಜನಪ್ರಿಯತೆ ಏರುತ್ತದೆಯೋ ಅಂಥದನ್ನೇ ಹಾಕುತ್ತೇವೆ ಎನ್ನುತ್ತಾರೆ. ಸಿನೆಮಾದವರೂ ಹೀಗೆಯೇ – ಜನರಿಗೆ ಯಾವುದು ಬೇಕೋ ಅದನ್ನೇ ನಾವು ಕೊಡುವುದು; ವೃಥಾ ದುಡ್ಡು ಸುರಿದು ನಷ್ಟ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ ಎನ್ನುತ್ತಾರೆ. ವರ್ತಮಾನ ಪತ್ರಿಕೆಗಳು ಪ್ರಸಾರಸಂಖ್ಯೆ ಹೆಚ್ಚಿಸಿಕೊಳ್ಳಲು ರೋಚಕ ಲೇಖನಗಳನ್ನು ಪ್ರಕಟಿಸುತ್ತವೆ. ದಾರಿ ತಪ್ಪಿದ ಈ ಪರಿಸ್ಥಿತಿಯನ್ನು ಸರಿಮಾಡುವುದು ಹೇಗೆ?

ಅಧ್ಯಾತ್ಮವನ್ನಂತೂ ಸಂವಹಿಸುವುದು ಸಾಧ್ಯವಿಲ್ಲ, ವಿವೇಕ ವನ್ನಾದರೂ ಪ್ರತಿಪಾದಿಸಲು ಪ್ರಯತ್ನಿಸಬಹುದು, ಅಲ್ಲವೆ? ಹೀಗೆಂದು 'ಸದ್ಬೋಧಚಂದ್ರಿಕೆ', 'ಮಂಜುವಾಣಿ', 'ವಿವೇಕಪ್ರಭ' ಇತ್ಯಾದಿ ಪತ್ರಿಕೆಗಳು ಪ್ರಯತ್ನಿಸಿದರೆ, ಅವುಗಳ ಪ್ರಸಾರ ಸಂಖ್ಯೆ ಏರುವುದೇ ಇಲ್ಲ. ಜನರಿಗೆ ವಿವೇಕವೂ ಬೇಡವಾಗಿದೆಯೆ? ತಂತ್ರಕ್ಕೆ ಪ್ರತಿ ತಂತ್ರ, ಹಿಂಸೆಗೆ ಪ್ರತಿ ಹಿಂಸೆ, ಮೋಸಕ್ಕೆ ಪ್ರತಿ ಮೋಸ – ಇದೇ ಆಧುನಿಕ ಜನಜೀವನದ ಸ್ಥಾಯೀಶ್ರುತಿಯಾಗಿಬಿಟ್ಟಿದೆ.

ಇದಕ್ಕೆ ಕಾರಣ ಯುವಜನರಿಗೆ ಸರಿಯಾದ ಮಾರ್ಗದರ್ಶನ ಇಲ್ಲದಿರುವುದು. ಮೀಸಲಾತಿ, ಜಾತಿ ರಾಜಕೀಯ, ವಶೀಲಿಬಾಜಿ ಇತ್ಯಾದಿಗಳಿಂದಾಗಿ ಶಿಕ್ಷಣಕ್ಷೇತ್ರ ಸಂಪೂರ್ಣವಾಗಿ ಹಾಳಾಗಿದೆ. ಇಂದಿನ ವಿದ್ಯಾರ್ಥಿ ತನ್ನ ಶಿಕ್ಷಣದ ಅವಧಿಯಲ್ಲಿ ಒಂದೇ ಒಂದು ಷೇಕ್ಸ್‌ಪಿಯರ್ ನಾಟಕವನ್ನು ಓದಿರುವುದಿಲ್ಲ, ಒಂದೇ ಒಂದು ಒಳ್ಳೆಯ ಕಾವ್ಯಭಾಗವನ್ನು ಅಧ್ಯಯನ ಮಾಡಿರುವುದಿಲ್ಲ. ತರ್ಕ, ತತ್ತ್ವ, ವಿಜ್ಞಾನ ಮುಂತಾದುವು ಎಲ್ಲರಿಗೂ ದಕ್ಕುವುದು ಸಾಧ್ಯವಿಲ್ಲ ಎಂದು ಒಪ್ಪಿಕೊಂಡರೂ, ಮಕ್ಕಳಲ್ಲಿ ಒಳ್ಳೆಯ ನೀತಿ, ಒಳ್ಳೆಯ ಭಾವ – ಇವನ್ನು ಬೆಳೆಸದೆ ಇದ್ದರೆ ಅವರಿಗೆ ಮುಂದೆ ಉಳಿಯುವುದಾದರೂ ಏನು? ಮನೋಭೂಮಿಕೆಯನ್ನು ಎಳೆತನದಲ್ಲೇ ತಿದ್ದದೆ ಇದ್ದರೆ ಅವರಿಗೆ ಉಳಿಯುವುದು ಕೇವಲ ಖಾಲಿತನ, ಅಲ್ಲವೇ?

ಹದಿವಯಸ್ಸಿನ ಯುವಜನರಲ್ಲಿ ಮುಖ್ಯವಾಗಿ ಕಾಣಿಸಿ ಕೊಳ್ಳುವುದು – ಪರೀಕ್ಷೆಗಳಿಗಾಗಿ ಸ್ಪರ್ಧಾತ್ಮಕವಾಗಿ ಓದುವ ಕ್ರಮ ಹೇಗೆ? ಮನಸ್ಸನ್ನು ಅಧ್ಯಯನದ ಮೇಲೆ ಏಕಾಗ್ರತೆಯಿಂದ ತೊಡಗಿಸುವುದು ಹೇಗೆ? ವಿವಿಧ ರಂಗಗಳಲ್ಲಿ ಎದುರಾಗುವ ಸೋಲುಗಳಿಂದ ಉಂಟಾಗುವ ಖಿನ್ನತೆಯನ್ನು ಎದುರಿಸುವುದು ಹೇಗೆ? ಇವೆಲ್ಲದರ ಮಧ್ಯೆ ಆತ್ಮವಿಶ್ವಾಸ ತಗ್ಗದಂತೆ ಕಾಪಾಡಿ ಕೊಳ್ಳುವುದು ಹೇಗೆ? – ಇತ್ಯಾದಿ ಸಮಸ್ಯೆಗಳು. ಇವುಗಳ ಜೊತೆಗೆ ವಯೋಧರ್ಮವನ್ನು ಅನುಸರಿಸಿ ಕಾಣಿಸಿಕೊಳ್ಳುವ ಲೈಂಗಿಕ ವಿಚಾರಗಳ ಕುರಿತಾದ ಗಲಿಬಿಲಿಗಳು, ಅಜ್ಞಾನದಿಂದ ಉಂಟಾ ಗುವ ಹೆದರಿಕೆಗಳು ಮತ್ತು ಪ್ರವಾಹದ ಹಾಗೆ ಬಂದು ಮನಸ್ಸನ್ನು ಕೊಚ್ಚಿ ಕೊಂಡೊಯ್ಯುವ ಲೈಂಗಿಕಾಕರ್ಷಣೆಯ ಭಾವಲಹರಿಯ ನಿರ್ವಹಣೆ. ಇವುಗಳಲ್ಲಿ ಲೈಂಗಿಕ ವಿಚಾರಗಳನ್ನು ಹೊರತುಪಡಿಸಿ ಉಳಿದ ಸಮಸ್ಯೆಗಳಿಗೆ ಸರಿಯಾದ ಮಾರ್ಗದರ್ಶನವನ್ನು 'ವಿವೇಕಪ್ರಭ' ಆಗಿಂದಾಗ್ಯೆ ನೀಡುತ್ತಲೇ ಬಂದಿದೆ. ಆಸಕ್ತಿ ವಹಿಸಿದರೆ ಸಾಧಾರಣ ಪತ್ರಕರ್ತರೂ ಸಹ ಯುವಜನರ ಸಮಸ್ಯೆಗಳೆಲ್ಲಕ್ಕೂ ಪರಿಹಾರವನ್ನೂ ವೈಯಕ್ತಿಕ ಮಾರ್ಗದರ್ಶನವನ್ನೂ ತಮ್ಮ ಪತ್ರಿಕೆಗಳ ಮೂಲಕ ನೀಡುವುದು ಸಾಧ್ಯ ಎಂದು ಇತ್ತೀಚೆಗೆ ಕೆಲವು ಪತ್ರಕರ್ತರು ತೋರಿಸಿಕೊಟ್ಟಿದ್ದಾರೆ.

ಬಹುಸಂಖ್ಯಾತ ಸಾಮಾನ್ಯ ಜನರನ್ನು ಪರಿಗಣಿಸುವುದಾದರೆ, ಹದಿಹರೆಯವನ್ನು ದಾಟಿ ವಿದ್ಯಾಭ್ಯಾಸವನ್ನು ಮುಗಿಸಿ ಕೆಲಸ ಹುಡುಕಿಕೊಂಡೋ ಅಥವಾ ಇರುವ ಆಸ್ತಿಯನ್ನು ಬಳಸಿಕೊಂಡೋ ಬದುಕಿನಲ್ಲಿ 'ನೆಲೆ' ಆಗಿಬಿಟ್ಟ ಮೇಲೆ, ಎರಡು–ಮೂರು ದಶಕಗಳ ಕಾಲ ವರ್ಷಗಳು ಉರುಳಿದ್ದು

ಗೊತ್ತೇ ಆಗುವುದಿಲ್ಲ. ಈ ಅವಧಿಯಲ್ಲಿ ಧರ್ಮ, ಅಧ್ಯಾತ್ಮ ಅಂದರೆ ರೂಢಿಗತ ಸಾಂಪ್ರದಾಯಿಕ ಆಚರಣೆಗಳು ಅಷ್ಟೆ. ಇಚ್ಛಾಪೂರ್ವಕವಾಗಿ ಅಳವಡಿಸಿಕೊಂಡ ಒಂದು ನೈತಿಕ ಶಿಸ್ತಾಗಲಿ, ಭಾವಮೀಮಾಂಸೆಯಾಗಲಿ, ತನ್ನದೇ ಆದ ವಿಶಿಷ್ಟ ವೈಚಾರಿಕ ಚಿಂತನೆಯ ಧೋರಣೆಯಾಗಲಿ ಇರುವುದು ಕಡಮೆ. ಪ್ರವಾಹದಲ್ಲಿ ಸುಮ್ಮನೆ ತೇಲಿಹೋಗುವ ಮನೋಭಾವ ಕಂಡುಬರುವುದೇ ಹೆಚ್ಚು. ಮಾಧ್ಯಮ ಇವರಿಗೆ ತಂದು ಮುಟ್ಟಿಸುವುದನ್ನು ಇವರು ಸುಮ್ಮನೆ ಗ್ರಹಿಸುತ್ತಾರೆಯೇ ಹೊರತು ವಿಮರ್ಶಿಸುವ ಗೋಜಿಗೆ ಹೋಗುವುದಿಲ್ಲ. ಈ ಹಂತದಲ್ಲಿ ಮನುಷ್ಯನ ಮನಸ್ಸು ಅಧ್ಯಾತ್ಮದ ಬಗೆಗಾಗಲಿ, ನೈತಿಕ ಮೌಲ್ಯಗಳ ಬಗೆಗಾಗಲಿ ಗಂಭೀರ ನಿಲುವು ತಾಳುವುದು ಅಪರೂಪವೇ.

ತಾರುಣ್ಯ ಮುಗಿದು ದೇಹಬಲ ಕುಗ್ಗುತ್ತಿದೆ ಎನ್ನಿಸಿದಾಗ ಇದ್ದಕ್ಕಿದ್ದಂತೆ ಮನುಷ್ಯನಿಗೆ ಗಾಬರಿಯಾಗುತ್ತದೆ, ಚೇತನವನ್ನು ಹಿಡಿದು ಬಲವಾಗಿ ಅಲ್ಲಾಡಿಸಿದಂತೆ ಆಗುತ್ತದೆ. "ಎಲಾ, ನಾನು ಮಾಡಬೇಕಾದದ್ದು ಮಾಡದೆ ವೃಥಾ ಇಷ್ಟು ವರ್ಷಗಳನ್ನು ಕಳೆದುಬಿಟ್ಟೆನಲ್ಲ!" ಎಂಬ ಭಾವ ಆವರಿಸಿಕೊಳ್ಳುತ್ತದೆ. ತಮ್ಮ ಅಂತರ್ಯವೇ ತಮ್ಮನ್ನು ಕ್ಷಮಿಸಲಾರದಂತಹ ಘೋರ ಅಪರಾಧಗಳನ್ನು ಮಾಡಿದವರಿಗೆ, ಅದರ ಬಗೆಗೆ ಪಶ್ಚಾತ್ತಾಪ ಕಿತ್ತು ತಿನ್ನಲಾರಂಭಿಸುತ್ತದೆ. ಆಗ – ಇನ್ನೂ ಬೇಕಾದಷ್ಟು ಕಾಲಾವಕಾಶವಿದೆಯಪ್ಪ, ಮಾಡದೆ ಬಿಟ್ಟದ್ದನ್ನು ಮಾಡಿ ಮುಗಿಸಬಹುದು ಎಂದು ಧೈರ್ಯ ಕೊಡುವವರು, ಉತ್ಸಾಹ ತುಂಬುವವರು ಬೇಕು; ಕ್ಷಮಿಸಲಾರದಂತಹ ತಪ್ಪು ಯಾವುದೂ ಇಲ್ಲ, ಇನ್ನು ಮುಂದೆ ಮಾಡದಿದ್ದರೆ ಆಯಿತು ಎಂದು ಸಮಾಧಾನ, ಭರವಸೆ ನೀಡುವವರು ಬೇಕು. ಈ ಹಂತದಲ್ಲಿ ಇದೇ ಅಧ್ಯಾತ್ಮವಾಗುತ್ತದೆ. ಇದನ್ನು ಮಾಧ್ಯಮದ ಮೂಲಕ ಧಾರಾಳವಾಗಿ ಕೊಡಬಹುದು; 'ವಿವೇಕಪ್ರಭ' ಇದನ್ನು ತುಂಬ ಚೆನ್ನಾಗಿ ಮಾಡಿಕೊಂಡು ಬರುತ್ತಿದೆ. ಸಂತರ ಜೀವನಚರಿತ್ರೆಯ ಭಾಗಗಳು, ಕಥಾನಕಗಳು, ನೀತಿಬೋಧೆಗಳು, ವಿಶ್ಲೇಷಣಾತ್ಮಕ ಲೇಖನಗಳು ಇಲ್ಲಿ ಪ್ರಸ್ತುತವಾಗುತ್ತವೆ.

ಇನ್ನೂ ಸ್ವಲ್ಪ ವಯಸ್ಸಾದ ಮೇಲೆ ಮನುಷ್ಯನ ಮನಸ್ಸು ಒಂದು ವಿಧವಾದ ಭ್ರಮೆಗೀಡಾಗುತ್ತದೆ. ಆಗ ದೂರ ನಿಂತು ಧೈರ್ಯ ಹೇಳಿದರೆ ಸಾಲದು; **'ಮಾ ಭೈಷ್ಟ ವಿದ್ವನ್, ತವ ನಾಸ್ತ್ಯಪಾಯಃ; ಸಂಸಾರಸಿಂಧೋಸ್ತರಣೇಽಸ್ತ್ಯುಪಾಯಃ'** (ಶಂಕರಾಚಾರ್ಯರ ವಿವೇಕಚೂಡಾಮಣಿ, ೪೩ನೆಯ ಶ್ಲೋಕ) **"ಹೇ ವಿದ್ವಾಂಸನೇ, ಭಯಪಡಬೇಡ. ನಿನಗೆ ಅಪಾಯವಿಲ್ಲ. ಸಂಸಾರಸಾಗರವನ್ನು ದಾಟಲು ಉಪಾಯವಿದೆ."** ಹೀಗೆ ಭರವಸೆ ಕೊಡುವವರು ಬೇಕು. **'ಯಾರಿಗೆ ಯಾರೋ ಪುರಂದರ ವಿಠಲ'** ಎಂಬಂತಹ ಜಗತ್ತಿನಲ್ಲಿ, ಈಗಾಗಲೇ spent force ಆಗಿಬಿಟ್ಟಿರುವ ಇಂಥವರನ್ನು ಯಾರು ತಾನೆ ಆತುಕೊಳ್ಳುತ್ತಾರೆ? ಆದ್ದರಿಂದ ಈಗ ಮನುಷ್ಯ ದೇವರು, ಭೂತ, ಪ್ರೇತ ಇತ್ಯಾದಿ **'ಕಾರಣಿಕ'** ಶಕ್ತಿಗಳನ್ನು ಆಶ್ರಯಿಸಿ ಶರಣಾಗುತ್ತಾನೆ; 'ನಡೆದುಕೊಳ್ಳಲು' ಪ್ರಾರಂಭಿಸುತ್ತಾನೆ. ಸ್ವಲ್ಪ ವಿಚಾರವಂತನಾದರೆ, ಅವನಿಗೆ ಪ್ರತ್ಯಕ್ಷವಾಗಿ ಪವಾಡಗಳನ್ನು ಮಾಡಿ ತೋರಿಸಿ ನಂಬಿಕೆ ಹುಟ್ಟುವಂತೆ ಮಾಡುವವರು ಬೇಕಾಗುತ್ತಾರೆ; ಅವನು saint-hunter ಆಗಿ ಅಂಥವರನ್ನು ಹುಡುಕಿಕೊಂಡು ಹೊರಡುತ್ತಾನೆ. ಇನ್ನು ವೈಜ್ಞಾನಿಕ ಮನೋಭಾವದವನೇ ಆಗಿಬಿಟ್ಟರಂತೂ, ಅವನಿಗೆ ಸ್ಥಾಪಿತ ಚಾರಿತ್ರ್ಯವುಳ್ಳ, ಪವಾಡದ ಮಟ್ಟವನ್ನು ಮೀರಿದ, ರಾಮಕೃಷ್ಣ–ವಿವೇಕಾನಂದ–ರಮಣಮಹರ್ಷಿ ಇತ್ಯಾದಿ ಆಧುನಿಕ ಸಂತರು ಆಪ್ಯಾಯಮಾನರಾಗುತ್ತಾರೆ. ಅವರು ಹೇಳುವುದೆಲ್ಲವೂ ಅವನಿಗೆ ಎಷ್ಟರಮಟ್ಟಿಗೆ ಸರಿ ಎನ್ನಿಸುತ್ತದೆ ಎಂದರೆ, ಶ್ರೀರಾಮಕೃಷ್ಣ ವಚನವೇದ ಓದುವಾಗ ತಾನೇ ಗುರುಮಹಾರಾಜರಲ್ಲಿ ಒಂದಾಗಿ ಹೋಗಿರುವೆನೆಂದು ಭಾವಿಸಿಕೊಳ್ಳುತ್ತಾನೆ; ಕೃತಿಶ್ರೇಣಿ ಓದುವಾಗ ತಾನು ವಿವೇಕಾನಂದರ ಅಪರಾವತಾರ ಎಂದುಕೊಳ್ಳುತ್ತಾನೆ. ಈ ಮನಃಸ್ಥಿತಿ ಸಂತೋಷವನ್ನು ಕೊಡುವುದಾದರೂ, ಇದೊಂದು ಭ್ರಮೆ ಎನ್ನುವುದನ್ನು ಮರೆಯಬಾರದು. ಇಂಥವರನ್ನು ಎಚ್ಚರಿಸುವ ಕೆಲಸವನ್ನೂ ಸಹ 'ವಿವೇಕಪ್ರಭ' ಪರೋಕ್ಷವಾಗಿ ತನ್ನ ಸಂಪಾದಕೀಯಗಳ ಮೂಲಕ ಮಾಡುತ್ತಿದೆ. ಇದೇನೂ ಅತಿಶಯೋಕ್ತಿಯಲ್ಲ.

ಹೀಗೆ, ಮೊದಲೇ ಹೇಳಿದ ಹಾಗೆ, ನಿಜವಾದ ಅಧ್ಯಾತ್ಮವನ್ನೇ ಸಂವಹನ ಮಾಡಲು ಸಾಧ್ಯವಾಗದೆ ಇದ್ದರೂ, ಸಹಮಾನವರಿಗೆ ಅವರ ಜೀವನದ ಯಾವುದೇ ಹಂತದಲ್ಲೂ ಪ್ರಸ್ತುತವಾಗಬಹುದಾದ, ಪ್ರಯೋಜನವಾಗಬಹುದಾದ, ಭರವಸೆ ಕೊಡಬಹುದಾದ ಬರಹಗಳ ಮೂಲಕ 'ಮಾಧ್ಯಮ'ವು ಸೇವೆ ಸಲ್ಲಿಸಬಹುದು, ನೆರವಾಗಬಹುದು. 'ವಿವೇಕಪ್ರಭ' ಇದನ್ನು ತುಂಬ ಚೆನ್ನಾಗಿ ಮಾಡುತ್ತಿದೆ ಎನ್ನುವುದು ನಮಗೆಲ್ಲರಿಗೂ ಹೆಮ್ಮೆಯ ಸಂಗತಿ.

## ಜಿ.ಎಸ್. ಜಯದೇವ್

*(ಚಾಮರಾಜ ನಗರದಲ್ಲಿ 'ದೀನಬಂಧು' ಎಂಬ ಅನಾಥ ಮಕ್ಕಳ ಮನೆಯನ್ನೂ, ಇನ್ನಿತರ ಸೇವಾ ಸಂಸ್ಥೆಗಳನ್ನೂ ನಡೆಸುತ್ತಿರುವ ಶ್ರೀಯುತರ ಹಲವು ಲೇಖನಗಳು ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ.)*

ಇಂದು ನಮ್ಮ ಭೂಮಂಡಲದಲ್ಲಿ ೩೬,೦೦೦ ಅಣು ಬಾಂಬುಗಳನ್ನು ತಯಾರು ಮಾಡಿ ಇಟ್ಟುಕೊಂಡಿದ್ದೇವೆ. ಇವು ಹಿರೋಶಿಮಾ–ನಾಗಸಾಕಿಗಳ ಮೇಲೆ ಹಾಕಿದ ಅಣುಬಾಂಬಿಗಿಂತ ೨೬೬೭ ಪಟ್ಟು ಹೆಚ್ಚು ಶಕ್ತಿಶಾಲಿ. ಬಲಿಷ್ಠ ದೇಶ ಅಮೆರಿಕಾ ೧೦,೯೦೦ ಅಣುಬಾಂಬುಗಳನ್ನು ಹೊಂದಿದೆ. ರಷ್ಯಾ ೧೮,೪೦೦ ಬಾಂಬುಗಳನ್ನು ಹೊಂದಿರುವುದೆಂದು ಅಂಕಿಅಂಶಗಳು ಹೇಳುತ್ತವೆ. ಇಸ್ರೇಲ್ ಮತ್ತು ಫ್ರಾನ್ಸ್‌ನಂತಹ ಚಿಕ್ಕ ರಾಷ್ಟ್ರಗಳು ೩೫೦ ರಿಂದ ೪೦೦ ಬಾಂಬುಗಳನ್ನು ಹೊಂದಿವೆ. ಚೈನಾ, ಭಾರತ, ಪಾಕಿಸ್ತಾನಗಳ ಬಳಿಯೂ ಅಣುಬಾಂಬುಗಳಿವೆ.

ಇದರ ವಾರಸುದಾರರ ಮನಸ್ಸು ಹೇಗೆ ಕೆಲಸ ಮಾಡುತ್ತದೆಂದು ಯಾರು ತಾನೆ ಬಲ್ಲರು? 'ನನ್ನ ಗಡಿಯಾರ ಮಾತ್ರ ಸರಿ' ಎಂದು ಭಾವಿಸುವ ಮನುಷ್ಯನ ಮನಸ್ಸು ಯಾವಾಗ

ಏನು ಮಾಡುತ್ತದೆ ಎಂದು ಊಹಿಸುವುದಾದರೂ ಹೇಗೆ? ಈ ವಾಸ್ತವಾಂಶಗಳು ಎಲ್ಲರ ಗಮನಕ್ಕೆ ಬಂದಿದೆಯೆ? ಒಂದು ವೇಳೆ ಈ ಅಂಕಿಅಂಶಗಳು ಎಲ್ಲರ ಅರಿವಿಗೆ ಬಂದರೂ ಸಹ, ಪರಿಹಾರ ಏನು? ಈ ಅವಘಡಗಳಿಂದ ನಮ್ಮ ಭೂಮಿಯನ್ನು ಪಾರು ಮಾಡುವುದು ಹೇಗೆ?

ಈ ಪ್ರಶ್ನೆಗಳಿಗೆ ಒಂದೇ ಮಾತಿನಲ್ಲಿ ಉತ್ತರ ಕೊಡುವುದಾದರೆ ಅದು 'ಅಧ್ಯಾತ್ಮ ಮತ್ತು ಮಾಧ್ಯಮ'. **ಅಧ್ಯಾತ್ಮ ಬದುಕಿಗೆ ಒಂದು ಇತ್ಯಾತ್ಮಕ ಅರ್ಥ ಕೊಡುತ್ತದೆ. ಮಾಧ್ಯಮ ಅದನ್ನು ಪ್ರಚಾರ ಮಾಡುತ್ತದೆ**.

ಈ ಚರ್ಚೆಯ ಹಿನ್ನೆಲೆಯಲ್ಲಿ ಅಧ್ಯಾತ್ಮ ಎಂದರೆ ಏನು ಎಂದು ಅರಿಯೋಣ. **ಅಧ್ಯಾತ್ಮ ಜಾತಿಧರ್ಮಗಳನ್ನು ಮೀರಿದ ವ್ಯಕ್ತಿನಿಷ್ಠ ಅಮೂರ್ತ ವಿದ್ಯಮಾನ**. ಶ್ರೀರಾಮಕೃಷ್ಣ ಪರಮಹಂಸರ ಗೋಸುಂಬೆ ಕಥೆಯ ಹಾಗೆ ಇದರಲ್ಲಿ ಅನೇಕ ಪರ್ಯಾಯಗಳು ಸಾಧ್ಯ. ಆದರೆ ಎಲ್ಲರೂ ಒಪ್ಪುವ ಒಂದು ತಳಹದಿ ಅಧ್ಯಾತ್ಮಕ್ಕಿರುವುದನ್ನು ಗುರುತಿಸಬಹುದು. ಸತ್ಯ, ಶಾಂತಿ, ಅಹಿಂಸೆ, ಪ್ರೀತಿ ಮುಂತಾದ ಮೌಲ್ಯಗಳೇ ಅಧ್ಯಾತ್ಮದ ತಳಹದಿ. ನ್ಯಾಯನಿಷ್ಠವಾದ ಮನಸ್ಸು ಈ ಮೌಲ್ಯಗಳ ಚುಕ್ಕಾಣಿ ಹಿಡಿದು ತನ್ನ ಜೀವನದ ಹಡಗನ್ನು ನಡೆಸುತ್ತದೆ. ಆದ್ದರಿಂದ ಅಧ್ಯಾತ್ಮ ಎಂಬುದು ಮೌಲ್ಯಗಳ ಆಚರಣೆಯಿಂದ ಮಾಡುವ ಮನೋಧರ್ಮ; ಬದುಕಿನ ಬಗ್ಗೆ ಇತ್ಯಾತ್ಮಕ ನಿಲುವು; ಜೀವನಪ್ರೀತಿ. ಅದು ಏರುವ ಶಿಖರ ಆಯಾ ವ್ಯಕ್ತಿಯ ಶಕ್ತಿಯನ್ನು ಅವಲಂಬಿಸಿದೆ.

ಇನ್ನು ಮಾಧ್ಯಮಕ್ಕೆ ಬರೋಣ. ಮಾಧ್ಯಮಗಳು ವಸ್ತುನಿಷ್ಠ ಸತ್ಯವನ್ನು ಬಿತ್ತರಿಸುವ ಸಂಸ್ಥೆಗಳು. ವರ್ತಮಾನದ ಆಗುಹೋಗುಗಳ ಬಗ್ಗೆ ತೀವ್ರ ಜನಾಭಿಪ್ರಾಯ ಮೂಡಿಸುವುದರ ಮೂಲಕ ಉತ್ತಮ ಸಮಾಜ ನಿರ್ಮಿಸುವುದು ಇದರ ಉದ್ದೇಶ. ಜನರಲ್ಲಿ ಸ್ವತಂತ್ರ ಆಲೋಚನಾಶಕ್ತಿ ಮೂಡಿಸಲು ಮತ್ತು ವೈಜ್ಞಾನಿಕ ದೃಷ್ಟಿ ಬೆಳೆಸಲು ಮಾಧ್ಯಮ ಸಹಾಯ ಮಾಡಬೇಕು. ಉತ್ತಮ ಸಮಾಜಕ್ಕೆ ವೈಜ್ಞಾನಿಕ ದೃಷ್ಟಿ ಎಷ್ಟು ಅಗತ್ಯವೋ ಅಧ್ಯಾತ್ಮವೂ ಅಷ್ಟೇ ಅಗತ್ಯ. ನಿಜವಾದ ವೈಜ್ಞಾನಿಕ ದೃಷ್ಟಿ ಅಧ್ಯಾತ್ಮಕ್ಕೆ ವಿರುದ್ಧವಲ್ಲ. ಈ ಸಂದರ್ಭದಲ್ಲಿ ವಾಲ್ಟೇರ್‌ನ ಒಂದು ಮಾತು ಮನೋಜ್ಞವಾಗಿದೆ: "ಅಸತ್ಯವಾದ ವಿಜ್ಞಾನ ನಾಸ್ತಿಕರನ್ನು ಸೃಷ್ಟಿಸುತ್ತದೆ; ನಿಜವಾದ ವಿಜ್ಞಾನ ಮಾನವನನ್ನು ದಿವ್ಯತೆಯ ಮುಂದೆ ತಲೆಬಾಗುವಂತೆ ಮಾಡುತ್ತದೆ." (False science creates atheists; true science prostrates man before divinity ) ಜೊತೆಗೆ ಐನ್‌ಸ್ಟೈನ್‌ರ ಮಾತನ್ನೂ ಗಮನಿಸಬೇಕು: "ಧರ್ಮರಹಿತ ವಿಜ್ಞಾನ ಕುಂಟನಂತೆ; ವಿಜ್ಞಾನರಹಿತ ಧರ್ಮ ಕುರುಡನಂತೆ" (Science without religion is lame, religion without science is blind).

ಆದರೆ ನಮ್ಮ ಮಾಧ್ಯಮಗಳನ್ನು ಗಮನಿಸಿದರೆ ಅವುಗಳಲ್ಲಿ ವೈಜ್ಞಾನಿಕ ದೃಷ್ಟಿ, ಅಧ್ಯಾತ್ಮ – ಈ ಎರಡೂ ಸಮರ್ಪಕವಾಗಿ ಮೂಡಿಬರುತ್ತಿಲ್ಲವೆಂದೇ ಹೇಳಬೇಕು. ಮಾಧ್ಯಮಗಳು ವೈಜ್ಞಾನಿಕ ದೃಷ್ಟಿಗಿಂತ ಮೂಢನಂಬಿಕೆಗಳಿಗೆ ಒಲವು ತೋರುತ್ತವೆ; ಅಧ್ಯಾತ್ಮದ ಮುಖ್ಯ ಸಂದೇಶವಾದ ಸಂಯಮಕ್ಕೆ ಬದಲಾಗಿ ದುರಾಸೆಯನ್ನು ಹೆಚ್ಚಿಸುವ ಸಂದೇಶ ನೀಡುತ್ತವೆ.

ಮಾಧ್ಯಮಗಳು ಆರ್ಥಿಕ ಸಂಸ್ಥೆಗಳಾದ್ದರಿಂದ ಬಳಕೆದಾರರ ಪ್ರವೃತ್ತಿ, ಅಭಿರುಚಿಗಳಿಗೆ ಅನುಗುಣವಾಗಿ ತಮ್ಮ ನಿಲುವುಗಳನ್ನು ನಿರಂತರವಾಗಿ ಬದಲಿಸಿಕೊಳ್ಳುತ್ತಲೇ ಇರುತ್ತವೆ. ಮಾಧ್ಯಮಗಳಿಗೆ ಸಮಾಜದ ಸ್ವಾಸ್ಥ್ಯ, ಸಂಸ್ಕೃತಿಗಳಿಗಿಂತ ಮಾರುಕಟ್ಟೆಯಲ್ಲಿ ಚಾಲ್ತಿಯಲ್ಲಿರುವುದು ಮುಖ್ಯ. ಹಾಗಾಗಿ ಜನರಿಗೆ ಮುದ ನೀಡುವ ಕೀಳು ಪ್ರವೃತ್ತಿ, ಅಭಿರುಚಿಗಳಿಗೆ ಮತ್ತಷ್ಟು ಮೆರುಗು ನೀಡಿ ಅವುಗಳನ್ನೇ ಹಿಂತಿರುಗಿಸುತ್ತವೆ. ಆದರ್ಶ ಅಧ್ಯಾತ್ಮ ಮತ್ತು ಆದರ್ಶ ಪತ್ರಿಕೋದ್ಯಮವೇ ಮೊದಲಾದ ಮಾಧ್ಯಮಗಳು ಆದರ್ಶಪ್ರಾಯವಾಗಿರಬಲ್ಲವೇ ಹೊರತು, ಜನಗಳ ಸರಾಸರಿ ಮನಸ್ಸನ್ನು ಮುಟ್ಟಲಾರವು. ಹಾಗಾಗಿ ಈ ಆದರ್ಶದ ಕೆಳಗೆ ಯಾವುದೋ ಒಂದು ಆರೋಗ್ಯಕರ ಹಂತದವರೆಗೆ ರಾಜಿ ಮಾಡಿಕೊಳ್ಳುವುದು ಅನಿವಾರ್ಯ. ಈ ಆರೋಗ್ಯಕರ ಹಂತದಿಂದ ಮತ್ತೂ ಕೆಳಗಿಳಿದಾಗ 'ಮಾಧ್ಯಮ' ಮತ್ತು 'ಅಧ್ಯಾತ್ಮ' ಎರಡೂ ಸಮಾಜ ಕಂಟಕವಾಗಿ ಪರಿಣಮಿಸುತ್ತವೆ. ಅಧ್ಯಾತ್ಮದ ಅತ್ಯುನ್ನತ ಶಿಖರವೇರಿದ ಶ್ರೀರಾಮಕೃಷ್ಣ ಪರಮಹಂಸರೂ ಈ ರಾಜಿಯ ಬಗ್ಗೆ ಹಾಸ್ಯಮಾಡುತ್ತಾ ಒಪ್ಪಿಕೊಳ್ಳುತ್ತಾರೆ. ಅವರು ಹೇಳುತ್ತಿದ್ದರು – "ಈ ಕೊಲ್ಕತಾ ಜನರಿಗೆ ನೂರಕ್ಕೆ ನೂರು ಶುದ್ಧ ಅಧ್ಯಾತ್ಮ ಕೊಟ್ಟರೆ ಅವರು ಮತ್ತೆ ಬರುವುದೇ ಇಲ್ಲ; ಮೀನು ಕೊಡದಿದ್ದರೂ ಮೀನು ತೊಳೆದ ನೀರನ್ನಾದರೂ ಸೇರಿಸಬೇಕು." ಆದರೆ ಇಂದು ಪ್ರಚಾರದಲ್ಲಿರುವ ಆಧ್ಯಾತ್ಮಿಕ ಗುರುಗಳು ಈ ರಾಜಿಯನ್ನು ಮತ್ತೊಂದು ತುದಿಗೆ ಒಯ್ದಿದ್ದಾರೆ. ಮಠಮಾನ್ಯಗಳು ಆಧ್ಯಾತ್ಮಿಕ ಕೇಂದ್ರಗಳಾಗುವ ಬದಲು ವ್ಯಾವಹಾರಿಕ ಕೇಂದ್ರಗಳಾಗಿ ಪರಿಣಮಿಸಿವೆ.

ಆಧ್ಯಾತ್ಮಿಕ ಸಂಸ್ಥೆಗಳು ಮತ್ತು ಮಾಧ್ಯಮಗಳು ಜನಗಳಲ್ಲಿರಬಹುದಾದ ಶಕ್ತಿಯನ್ನಾಧರಿಸಿ ಬೆಳೆಯಬೇಕು. ಜನಸಮುದಾಯದಲ್ಲಿ ಸುಪ್ತವಾಗಿರುವ ಉದಾತ್ತ ಆಶೋತ್ತರಗಳಿಗೆ ವ್ಯಕ್ತವಾಣಿಯಾಗಿ ಕೆಲಸಮಾಡಬೇಕು. ಅನೈತಿಕ ಸ್ಪರ್ಧೆಯ ಇಂದಿನ ದಿನಗಳಲ್ಲಿ ಇದು ಸುಲಭಸಾಧ್ಯವಲ್ಲ. ಸಮುದಾಯದ ಬೆಳವಣಿಗೆ ಹಾಗೂ ಮಾಧ್ಯಮದ ಬೆಳವಣಿಗೆಗಳು ಪರಸ್ಪರ ಪೂರಕವಾದ ವಿದ್ಯಮಾನಗಳು. ಮಾಧ್ಯಮಗಳೆಲ್ಲ ಒಟ್ಟಾಗಿ ತಮ್ಮ ನಿಲುವುಗಳನ್ನು ದೃಢಪಡಿಸಿಕೊಳ್ಳುವುದಾದರೆ, ಜನಸಮುದಾಯದ ಒಟ್ಟಾರೆ ಅಭಿರುಚಿ ಮೇಲಕ್ಕೇರುತ್ತದೆ. ಜನಸಮುದಾಯದ ಅರಿವು ಹೆಚ್ಚಿದಂತೆ ಮಾಧ್ಯಮಗಳ ಸರಾಸರಿ ನಿಲುವು ಸಹ ಮೇಲೇರುತ್ತದೆ. ಆದರೆ ಒಂದು ಸಮುದಾಯದ ಮೌಲ್ಯ ಮತ್ತು ಸಂಸ್ಕೃತಿಗಳು ಈ ಸಂಸ್ಥೆಗಳ ಆದ್ಯತೆಗಳಾಗದೆ ಹೋದಾಗ, ಅವು ತಾವು ಮಾತ್ರ ಬೆಳೆಯುವ ಬಗೆಯನ್ನು ಕಂಡುಕೊಳ್ಳುತ್ತವೆ. ಸಮುದಾಯದ ದೌರ್ಬಲ್ಯವನ್ನು ಬಂಡವಾಳ ಮಾಡಿಕೊಂಡಾಗ ಸುಲಭವಾಗಿ ಬೆಳೆಯಬಹುದು. ರಾಜಕೀಯ ವ್ಯಕ್ತಿಗಳು, ಬಹುರಾಷ್ಟ್ರೀಯ ಕಂಪನಿಗಳು, ಆಧ್ಯಾತ್ಮಿಕ ಮತ್ತು ಮಾಧ್ಯಮದ ಸಂಸ್ಥೆಗಳು – ಇವೆಲ್ಲ ಶೀಘ್ರವಾಗಿ ಬೆಳೆಯುವ ಬಗೆ ಇದೇ. ಜನಗಳ ದೌರ್ಬಲ್ಯಗಳನ್ನು ಬಂಡವಾಳ ಮಾಡಿಕೊಂಡಾಗ ಎಂದರೆ ಸಮುದಾಯದಲ್ಲಿ ಹಾಸುಹೊಕ್ಕಾಗಿರುವ

ದೌರ್ಬಲ್ಯಗಳಿಗೆ ಆಸರೆಯಾಗಿ ನಿಂತಾಗ ಸಮುದಾಯ ಇವರನ್ನು ಯಾವುದೇ ಪ್ರತಿರೋಧವಿಲ್ಲದೆ ಸ್ವಾಗತಿಸುತ್ತದೆ. ಇದರ ಒಟ್ಟಾರೆ ಪರಿಣಾಮ ಎಂದರೆ ಸರ್ವನಾಶ.

ಜನರಲ್ಲಿ ಅರಿವು ಮೂಡಿದಾಗ ಸಮಾಜದ ಸ್ವಾಸ್ಥ್ಯ ಸಾಧ್ಯ. ಈ ಬಗೆಯ ಆರೋಗ್ಯಕರ ಅರಿವು ಮೂಡಿಸುವ ಶಕ್ತಿ ಮಾಧ್ಯಮಕ್ಕಿದೆ. ಮಾಧ್ಯಮ ಈ ಜವಾಬ್ದಾರಿಗೆ ಬದ್ಧವಾದ ನಿಲುವು ತಾಳಬೇಕಾದರೆ ಅದಕ್ಕೆ ಅಧ್ಯಾತ್ಮದ ನೆರವು ಅಗತ್ಯ. ಅಧ್ಯಾತ್ಮದ ವಿಷಯದಲ್ಲಿ ಯಾವ ಗೊಂದಲವೂ ಇಲ್ಲ. **ಅದು ಶಾಂತಿ, ಅಹಿಂಸೆ, ಸತ್ಯ ಮುಂತಾದ ಮೌಲ್ಯಗಳ ಮೇಲೆ ನಿಲ್ಲುವ ಮನೋಧರ್ಮ**. ಈ ಮನೋಧರ್ಮ ನೀಡುವ ಸಾಮಾಜಿಕ ಬದ್ಧತೆ ಇದ್ದರೆ ಸಾಕು, ಅದು ನಮ್ಮ ಬರಹದಲ್ಲಿ ಮೂಡಿಬರುತ್ತದೆ ಅಥವಾ ದೃಶ್ಯ ಮಾಧ್ಯಮದಲ್ಲಿ ನಿಖರವಾದ ಸಂದೇಶ ನೀಡುತ್ತದೆ. ಜನಸಮುದಾಯಕ್ಕೆ ಹತಾಶ ಪರಿಸ್ಥಿತಿ ಬಂದೊದಗಿದಾಗ ಮಾಧ್ಯಮಗಳು ಉತ್ಸಾಹ ತುಂಬುವ ಸಂದೇಶ ನೀಡಬೇಕು; ಕೋಮು ದಳ್ಳುರಿ ಹತ್ತಿ ಉರಿದಾಗ ಅದು ಶಮನವಾಗುವ ಸಂದೇಶ ನೀಡಬೇಕು; ಅನ್ಯಾಯಗಳು ನಡೆದಾಗ ಅದನ್ನು ಬಯಲು ಮಾಡಿ ಎದುರಿಸಿ ನಿಲ್ಲುವ ಸಂದೇಶ ನೀಡಬೇಕು.

ನಮ್ಮ ಮಾಧ್ಯಮಗಳು ಇದನ್ನೆಲ್ಲ ಮಾಡುತ್ತಿವೆ ಎಂಬುದು ನಿಜ. ಅವಘಡಗಳ ಸಮಯದಲ್ಲಿ ಅತ್ಯಂತ ಜವಾಬ್ದಾರಿಯಿಂದ ವರ್ತಿಸುವ ನಮ್ಮ ವೃತ್ತಪತ್ರಿಕೆಗಳು, ದೃಶ್ಯಮಾಧ್ಯಮಗಳು ಸಾಮಾನ್ಯ ಪರಿಸ್ಥಿತಿಯಲ್ಲಿ ಉದ್ವೇಗ ಪ್ರಚೋದಕಗಳಾಗಿ ಕೆಲಸ ಮಾಡುತ್ತವೆ. ನೇತ್ಯಾತ್ಮಕ ಮಾಹಿತಿಗೆ ಮುಖಪುಟದಲ್ಲೇ ಸ್ಥಾನ ದೊರೆತುಬಿಡುತ್ತದೆ. ಡಾ. ಅಬ್ದುಲ್ ಕಲಾಂ ಅವರೂ ಸಹ ನಮ್ಮ ಮಾಧ್ಯಮಗಳ ಬಗ್ಗೆ ಇದೇ ಮಾತು ಹೇಳುತ್ತಾರೆ. ೨೦೦೮ ರ ಜನವರಿ ೧ ನೇ ತಾರೀಖು ಹೊಸವರ್ಷದ ಮೊದಲ ದಿನದ ಪತ್ರಿಕೆ ನೋಡಿದಾಗ ನನಗೆ ನಿರಾಶೆ ಕಾದಿತ್ತು. ಪ್ರಜಾವಾಣಿಯಂತಹ ಅತ್ಯಂತ ಜವಾಬ್ದಾರಿಯುತವಾದ ಪತ್ರಿಕೆಯ ಮುಖಪುಟದಲ್ಲೆ ವಿಕಾರವಾದ ಸೀರಿಯಲ್ ಕಿಲ್ಲರ್ ಮಹಿಳೆಯ ಒಂದು ದೊಡ್ಡ ಫೋಟೊ ಪ್ರಕಟವಾಗಿತ್ತು. ನೇತ್ಯಾತ್ಮಕ ಸುದ್ದಿಗಳನ್ನು ನಾವೇಕೆ ವೈಭವೀಕರಿಸಬೇಕು? ಜನಸಮುದಾಯಕ್ಕೆ ಇದರ ಉಪಯೋಗವಾದರೂ ಏನು? ಓದುಗರನ್ನು ಇದು ಹೇಗೆ ತಾನೇ ಸಶಕ್ತರನ್ನಾಗಿ ಮಾಡುತ್ತದೆ?

ಎಲ್ಲಾ ಇತ್ಯಾತ್ಮಕ ಸಂದೇಶಗಳಲ್ಲೂ ಅಧ್ಯಾತ್ಮ ಅಡಗಿದೆ. ಅದು ಸಮುದಾಯದ ಶಕ್ತಿಗೆ ಆಸರೆಯಾಗಿ ನಿಲ್ಲುತ್ತದೆ. ಇತ್ಯಾತ್ಮಕ ಸಂದೇಶಗಳು ಒಂದು ಸಮುದಾಯದಲ್ಲಡಗಿರುವ ಶಕ್ತಿಯ ಸುಪ್ತ ತಂತುಗಳನ್ನು ಮೀಟಿ, ಅದರ ಆತ್ಮವಿಶ್ವಾಸವನ್ನು ವರ್ಧಿಸುತ್ತದೆ. ನೇತ್ಯಾತ್ಮಕ ಸಂದೇಶಗಳು ಒಂದು ಸಮುದಾಯ ಮರೆಯಲಿಚ್ಛಿಸುವ ದೌರ್ಬಲ್ಯಗಳಿಗೆ ಜೀವ ತುಂಬುತ್ತದೆ. ನಿಷ್ಕ್ರಿಯವಾಗುತ್ತಿರುವ ದೌರ್ಬಲ್ಯಗಳನ್ನು ಮತ್ತೊಮ್ಮೆ ಮಾನಸಿಕ ವಲಯದಲ್ಲಾದರೂ ಕ್ರಿಯಾಶೀಲವಾಗುವಂತೆ ಮಾಡುತ್ತವೆ; ಇತ್ಯಾತ್ಮಕ ಸಂದೇಶದ ಅಭಾವದಲ್ಲಿ ನೇತ್ಯಾತ್ಮಕ ಸಂದೇಶಗಳು ಒಂದು ಇಡೀ ಜನಾಂಗದ ಕೀಳರಿಮೆಗೆ ಕಾರಣವಾಗಬಹುದು.

ಹಿಂದೆಯೆ ಹೇಳಿದಂತೆ ಅಣುಬಾಂಬಿನ ಅವಘಡದಿಂದ ನಮ್ಮನ್ನು ಪಾರುಮಾಡುವ ಶಕ್ತಿ ಅಧ್ಯಾತ್ಮವನ್ನೊಳಗೊಂಡ ಮಾಧ್ಯಮಕ್ಕೆ ಮಾತ್ರ ಇದೆ. ಈ ಅಂಶವನ್ನು ಕಡೆಗಣಿಸಿದರೆ ಈ ನೆಲ ಜೀವಹೀನವಾಗುವುದರಲ್ಲಿ ಸಂಶಯವೇ ಇಲ್ಲ. ಪರಿಸರ ವಿನಾಶದ ಈ ದಿನಗಳಲ್ಲಿ ನಮ್ಮ ಮಾಧ್ಯಮಗಳು ಹೆಚ್ಚು ಜವಾಬ್ದಾರಿಯಿಂದ ವರ್ತಿಸಿ ಈ ವಿನಾಶಗಳನ್ನು ತಡೆಯಬಹುದು. ಕೊಳ್ಳುಬಾಕ ಸಂಸ್ಕೃತಿಯ ಹಾವಳಿಯಿಂದ ಇಂದು ಪರಿಸರ ನಾಶವಾಗುತ್ತಿದೆ. ಆದರೂ ನಮ್ಮ ಮಾಧ್ಯಮಗಳು ಕೊಳ್ಳುಬಾಕ ಸಂಸ್ಕೃತಿಗೆ ಪೂರಕವಾಗಿಯೆ ಕೆಲಸ ಮಾಡುತ್ತಿವೆ. ಕೊಳ್ಳುಬಾಕ ಸಂಸ್ಕೃತಿಯ ಮೂಲಶಕ್ತಿಯಾದ ಜಾಹೀರಾತುಗಳಿಗೆ ಮಾಧ್ಯಮಗಳೇ ಕಾರಣ. ಪರಿಸರ ನಾಶಕ್ಕೆ ಕಾರಣವಾಗುವ ಯಾವ ಸರಕನ್ನೂ ಜಾಹೀರಾತು ಮಾಡುವುದಿಲ್ಲವೆಂದು ನಮ್ಮ ಮಾಧ್ಯಮಗಳು ಒಟ್ಟಾಗಿ ಪಣತೊಟ್ಟರೆ ಮಾತ್ರ ನಮ್ಮ ಉಳಿವು ಸಾಧ್ಯ.

ಒಟ್ಟು ಚರ್ಚೆಯ ಸಾರಾಂಶವನ್ನು ಈ ನಾಲ್ಕು ಮಾತುಗಳಲ್ಲಿ ಮುಗಿಸಬಹುದು. ನ್ಯಾಯನಿಷ್ಠವಾದ ಸುಸ್ಥಿರ ಸಮಾಜವನ್ನು ನಾವು ಕಟ್ಟುವುದಾದರೆ ಅದು ಅಧ್ಯಾತ್ಮ ಮತ್ತು ಮಾಧ್ಯಮಗಳ ಆರೋಗ್ಯಕರ ಸಮ್ಮಿಲನದಿಂದ ಮಾತ್ರ ಸಾಧ್ಯ. ಮಾಧ್ಯಮಗಳು ಜನಗಳಲ್ಲಡಗಿರುವ ಸುಪ್ತಶಕ್ತಿಯನ್ನು ಎಚ್ಚರಿಸಬೇಕು. ಇತ್ಯಾತ್ಮಕ ಸಂದೇಶಗಳೆಲ್ಲ ಆಧ್ಯಾತ್ಮವೇ ಆಗಿರುವುದರಿಂದ ಈ ಶಕ್ತಿ ತಾನಾಗಿಯೇ ಆಧ್ಯಾತ್ಮಿಕ ಆಯಾಮ ಪಡೆಯುತ್ತದೆ. ಎಚ್ಚೆತ್ತ ಚೇತನಗಳಿಗೆ ಹೆಚ್ಚಿನ ಅಧ್ಯಾತ್ಮ ಬೇಕಾದಾಗ ಅದಕ್ಕಾಗಿಯೇ ಮೀಸಲಾದ ಪತ್ರಿಕೆಗಳು ಈ ವಿಷಯಗಳನ್ನು ಪ್ರಕಟಿಸುತ್ತಿವೆ. ಸಮಾಜದ ಆರೋಗ್ಯ ಕಾಪಾಡುವಲ್ಲಿ ಅಧ್ಯಾತ್ಮ-ಮಾಧ್ಯಮಗಳ ಪಾತ್ರ ಅನಿವಾರ್ಯ ಎಂಬುದನ್ನು ನಾವೆಲ್ಲರೂ ಅರಿಯಲೇಬೇಕು.

## ಡಾ. ಕೆ.ಎಲ್. ಪ್ರಸನ್ನಾಕ್ಷಿ

*(ನಿವೃತ್ತ ಸಂಸ್ಕೃತ ಪ್ರಾಧ್ಯಾಪಕಿಯಾಗಿರುವ ಲೇಖಕಿ ಸಂಸ್ಕೃತ ವಾಙ್ಮಯದಲ್ಲಿ ಅಪಾರ ವಿದ್ವತ್ತುಳ್ಳವರು; ಆಶ್ರಮದ ಭಕ್ತರು.)*

**"ಭ**ಗವಾನ್ ವ್ಯಾಸರು ಹೇಳಿರುವಂತೆ ಕಲಿಯುಗದಲ್ಲಿ ಒಂದು ಕರ್ಮ ಉಳಿದಿದೆ, ಅದೇ ದಾನ. ದಾನದಲ್ಲಿ ಅಧ್ಯಾತ್ಮಜ್ಞಾನದಾನ ಪರಮೋತ್ಕೃಷ್ಟವಾದುದು (ಹೊತ್ತಿ ಉರಿಯುತ್ತಿರುವ ಅಶಾಂತಿ ಯಿಂದ ತುಂಬಿರುವ ಈ ಸಮಾಜಕ್ಕಂತೂ ಅತ್ಯಗತ್ಯವಾದುದು). ಯಾರು ಅಧ್ಯಾತ್ಮ ವಿದ್ಯಾದಾನ ಮಾಡುವರೋ ಅವರು ಜೀವಿ ಗಳನ್ನು ಹಲವು ಜನ್ಮಗಳಿಂದ ಪಾರುಮಾಡುವರು" ಎನ್ನುತ್ತಾರೆ ಸ್ವಾಮಿ ವಿವೇಕಾನಂದರು.

ಹಾಗಾದರೆ ಈ ಅಧ್ಯಾತ್ಮ ಎಂದರೇನು? ಆತ್ಮಕ್ಕೆ ಸಂಬಂಧಿ ಸಿದುದು, ಆತ್ಮವನ್ನು ಕುರಿತಾದದ್ದು ಅಧ್ಯಾತ್ಮ. ಈ 'ಆತ್ಮ' ಶಬ್ದಕ್ಕೆ ಎಲ್ಲೆಲ್ಲಿಯೂ ವ್ಯಾಪಿಸಿರುವವನು, ಎಲ್ಲವನ್ನೂ ತನ್ನಲ್ಲಿ ಸೇರಿಸಿ ಕೊಳ್ಳುವವನು, ಎಲ್ಲವನ್ನೂ ಅನುಭವಿಸುವವನು, ಯಾವಾಗಲೂ ಒಂದೇ ಸಮನಾದ ರೂಪದಿಂದ ಇರುವವನು, ಯಾವುದೇ

ರೀತಿಯ ಬದಲಾವಣೆಗಳಿಗೆ, ವಿಕಾರಗಳಿಗೆ ಒಳಗಾಗದವನು ಎಂದು ಬೇರೆ ಬೇರೆ ಧಾತುಗಳಿಂದ ವಿಭಿನ್ನ ಅರ್ಥಗಳಿವೆ. (**ಆಪ್** = ಹೊಂದು, ಹಬ್ಬಿರು, **ಆದಾ** =ತೆಗೆದುಕೋ, **ಅದ**=ತಿನ್ನು, **ಆತ್**=ಸತತ ವಿಕಾರರಹಿತ). ಈ ಎಲ್ಲವೂ **'ಆತ್ಮ'** ಪದಾರ್ಥಕ್ಕೆ ಸಮನ್ವಯವಾಗುವ ಅರ್ಥಗಳೇ ಆಗಿವೆ. ಅದನ್ನು ಅನುಭವಿಸಲು ಇಂದ್ರಿಯಗಳು, ಮನಸ್ಸು, ಬುದ್ಧಿ, ದೇಹಗಳು ದ್ವಾರಗಳಾಗುತ್ತವೆ. ಕೊನೆಯಲ್ಲಿ ಈ ಎಲ್ಲವನ್ನೂ ತನ್ನೊಳಗೇ ಸೆಳೆದುಕೊಂಡು ತಾನೇ ತಾನಾಗಿ ಸ್ವಸ್ವರೂಪದಲ್ಲಿ ಆತ್ಮನು ನೆಲೆ ನಿಲ್ಲುತ್ತಾನೆ. ಇದೇ ಸೃಷ್ಟಿ ಸ್ಥಿತಿಲಯಗಳ ಮರ್ಮ. ಆತ್ಮ, ಪ್ರಪಂಚ, ಆತ್ಮವು ಪ್ರಪಂಚದೊಡನೆ ಹೊಂದಿರುವ ಸಂಬಂಧ, ಆತ್ಮಾನುಭವದ ದ್ವಾರಗಳು – ಹೀಗೆ ಆತ್ಮಕ್ಕೆ ಸಂಬಂಧಿಸಿದ ಎಲ್ಲವೂ 'ಅಧ್ಯಾತ್ಮ' ವೇ ಆಗುತ್ತವೆ.

ಗೀತೆಯಲ್ಲಿ ಕೃಷ್ಣನು **'ಸ್ವಭಾವೋಽಧ್ಯಾತ್ಮಮುಚ್ಯತೇ'** – ಸ್ವಭಾವವೇ ಅಧ್ಯಾತ್ಮ ಎನ್ನುತ್ತಾನೆ. **'ಆತ್ಮಾನಂ ದೇಹಂ ಅಧಿಕೃತ್ಯ ಪ್ರತ್ಯಗಾತ್ಮತಯಾ ಪ್ರವೃತ್ತಂ ಪರಮಾರ್ಥ ಬ್ರಹ್ಮಾವಸಾನಂ ವಸ್ತು'** – ಪರಮಾತ್ಮವಾದ ಬ್ರಹ್ಮವಸ್ತು ದೇಹವಾಗಿ ಹೇಗೆ ವಿಕಾಸಗೊಂಡಿತೋ ಅದೇ ದಾರಿಯಲ್ಲಿ, ಆ ಮೂಲಕವಾಗಿ ಸಾಗುವಾಗ ಯಾವು ಯಾವುದು ಆತ್ಮಕ್ಕೆ ಲೋಕಸಂಪರ್ಕ ಸೇತುವಾಗಿ ಉಪಕರಣವಾಗಿದೆಯೋ ಅದೇ ಸ್ವಭಾವವೆಂದು ಶ್ರೀಶಂಕರಾಚಾರ್ಯರು ವಿವರಣೆ ನೀಡಿದ್ದಾರೆ. ಸ್ವಭಾವ ಎಂದರೆ ತನ್ನತನ ಎಂದೂ ಅರ್ಥ. ಉದಾಹರಣೆಗೆ ಬೆಳ್ಳಗೆ ದ್ರವವಾಗಿ ಮಧುರವಾಗಿ ಇರುವುದು ಹಾಲಿನ ಸ್ವಭಾವ. ಹಾಗೆಯೇ ಸತ್–ಚಿತ್–ಆನಂದವಾಗಿರುವುದು, ಸರ್ವವ್ಯಾಪಕತೆ, ನಿಷ್ಕಲ, ನಿರ್ಮಲ, ನಿರಂಜನ, ಪರಂಜ್ಯೋತಿರೂಪ – ಇವು ಆತ್ಮದ ಸ್ವಭಾವಗಳು. ಪ್ರತಿಕ್ಷಣ ಜೀರ್ಣವಾಗುವುದು, ನಶ್ವರತೆ – ಇವುಗಳು ಶರೀರದ ಸ್ವಭಾವಗಳು. ಚಂಚಲತೆ, ಸಂಕಲ್ಪ–ವಿಕಲ್ಪ ಶಕ್ತಿ, ಕರ್ತೃತ್ವ ಭಾವಗಳು ಮನಸ್ಸಿನ ಸ್ವಭಾವಗಳು ಹೀಗೆ ಆತ್ಮ ಮತ್ತು ಆತ್ಮ ಸಂಬದ್ಧವಾದ ಎಲ್ಲ ವಸ್ತುಗಳ ಸ್ವಭಾವವನ್ನೇ 'ಅಧ್ಯಾತ್ಮ' ಎಂದು ಕರೆಯುವುದು.

"ಅಧ್ಯಾತ್ಮವನ್ನು ತಿಳಿಯುವುದು ಹೇಗೆ? ಇದಕ್ಕೆ ಸಾಧನ ಗಳೇನು?" ಎಂಬ ಪ್ರಶ್ನೆ ಹುಟ್ಟುತ್ತದೆ. ಶ್ರವಣ ಮನನ ನಿದಿಧ್ಯಾಸನ ಮೊದಲಾದವು ಇದನ್ನು ಅರಿಯುವ ಸಾಧನಗಳೆಂದು ನಮ್ಮ ಋಷಿ ಗಳು ತಿಳಿಸಿಕೊಟ್ಟಿದ್ದಾರೆ. ಇವುಗಳಲ್ಲಿ ಮಾಧ್ಯಮವೂ ಸೇರುತ್ತದೆ.

ಒಂದು ಪದಾರ್ಥ ಇದೆ, ಅದರ ಗುಣ ಸ್ವಭಾವ ಇಂತಹುದು ಎಂದು ಪರಿಚಯಿಸಲು ಮಾಧ್ಯಮದ ಅಗತ್ಯ ಇದೆ. ಉದಾ: ಮೈಸೂರಿನ ದೇವರಾಜ ರಸ್ತೆಯಲ್ಲಿರುವ ಕನಕ ಮಹಲ್‌ನಲ್ಲಿ ಒಳ್ಳೆಯ ಸೀರೆಗಳು ಅರ್ಧ ಬೆಲೆಗೆ ಸಿಗುತ್ತದೆ ಎಂದು ಪತ್ರಿಕೆಯಲ್ಲಿ ಓದುತ್ತೇವೆ. ಆ ಅಂಗಡಿ, ಅದಿರುವ ಸ್ಥಳ, ಅಲ್ಲಿ ಸಿಗುವ ವಸ್ತು ಎಲ್ಲಾ ತಿಳಿಯುತ್ತದೆ. ಅನಂತರವೇ ನಮಗೆ ಅದನ್ನು ಹೊಂದಬೇಕೆಂಬ ಅಪೇಕ್ಷೆ, ಪಡೆಯಲು ಬೇಕಾದ ಸಿದ್ಧತೆ ಮುಂತಾದವು ನಡೆಯುತ್ತವೆ. ಇದೇ ರೀತಿ ಅಧ್ಯಾತ್ಮವಸ್ತುವಿನ ಪರಿಚಯ ಮಾಡಿಕೊಡುವಲ್ಲಿಯೂ ಮಾಧ್ಯಮಗಳು ಬಹು ಮುಖ್ಯ ಪಾತ್ರ ವಹಿಸುತ್ತವೆ.

ಮಾಧ್ಯಮಗಳನ್ನು ಸ್ಥೂಲವಾಗಿ **ದೃಶ್ಯ, ಶ್ರವ್ಯ, ಪಠ್ಯ** ಎಂದು ಮೂರು ಗುಂಪುಗಳಾಗಿ ವಿಭಾಗಿಸಬಹುದು. ದೃಶ್ಯ ಮಾಧ್ಯಮ ದಲ್ಲಿ – ಸಜ್ಜನರ ದರ್ಶನ, ತೀರ್ಥಕ್ಷೇತ್ರ ಸಂದರ್ಶನ, ದೂರ ದರ್ಶನ, ಗಣಕಯಂತ್ರ ಮೊದಲಾದವು ಸೇರುತ್ತವೆ. ಶ್ರವ್ಯದಲ್ಲಿ ಪ್ರವಚನಗಳು, ಆಕಾಶವಾಣಿ ಕಾರ್ಯಕ್ರಮಗಳು, ಪುರಾಣ ಹರಿ ಕಥಾಶ್ರವಣ ಇತ್ಯಾದಿಗಳು ಒಳಗೊಳ್ಳುತ್ತವೆ. ಪಠ್ಯದಲ್ಲಿ ಪತ್ರಿಕೆ ಗಳು, ಪವಿತ್ರಗ್ರಂಥಗಳು ಮೊದಲಾದವು ಗಣನೆಗೆ ಬರುತ್ತವೆ. ಪತ್ರಿಕೆಗಳಲ್ಲಿ ದಿನಪತ್ರಿಕೆ, ವಾರಪತ್ರಿಕೆ, ನಿಯತಕಾಲಿಕೆಗಳು ಅಧ್ಯಾತ್ಮವಿಚಾರಪ್ರಸಾರಕ್ಕಾಗಿಯೇ ವಿವಿಧ ಭಾಷೆಯ ಅನೇಕ ನಿಯತ ಕಾಲಿಕೆಗಳು, ದೂರದರ್ಶನದ ವಿವಿಧ ವಾಹಿನಿಗಳು ಮುಂತಾದ ಭೇದಗಳಿವೆ.

ಈ ಎಲ್ಲಾ ಮಾಧ್ಯಮಗಳೂ, ಪಡೆಯಬೇಕಾದ ಪದಾರ್ಥದ ಸ್ವರೂಪ ಗುಣ ಧರ್ಮಗಳನ್ನು ವಿವರಿಸಿ, ಅವನ್ನು ಹೊಂದುವ ಮಾರ್ಗ, ಬಗೆ, ಅಲ್ಲಿ ಅನುಸರಿಸಬೇಕಾದ ನಿಯಮಗಳು, ಮಾಡಬೇಕಾದದ್ದು, ಮಾಡಬಾರದ್ದು ಎಲ್ಲವನ್ನೂ ತಿಳಿಸುತ್ತವೆ. ಹೀಗೆ ಮಾಧ್ಯಮಗಳು ಮಂತ್ರಿಯಂತೆ ಗುಪ್ತ ಸಮಾಲೋಚಕ ನಂತೆ, ಆಪ್ತ ಸಹಚರನಂತೆ, ಸನ್ಮಾರ್ಗದಲ್ಲಿ ಒಯ್ಯುವ ಸನ್ಮಿತ್ರ ನಂತೆ ಕರ್ತವ್ಯವನ್ನು ನಿರ್ವಹಿಸುತ್ತವೆ. ವ್ಯಕ್ತಿಯ ಹೃದಯಕ್ಕೆ ಹಿತಾನುಭವವನ್ನೂ, ಬುದ್ಧಿಗೆ ಬೆಳಕನ್ನೂ, ಜೀವಕ್ಕೆ ಒಳ್ಳೆಯ ಪ್ರಚೋದನೆಯನ್ನೂ ಕೊಡುತ್ತವೆ.

ಆದರೆ ಕೇವಲ ಮಾತನಾಡುವುದು ಅಧ್ಯಾತ್ಮವಲ್ಲ, ಅರ ಗಿಳಿಯೂ ಮಾತನಾಡುವುದು, ಈಗಿನ ಕಾಲದಲ್ಲಿ ಯಂತ್ರ ಗಳೂ ಮಾತನಾಡುತ್ತವೆ. "ಆದರ್ಶಗಳ ಅನುಷ್ಠಾನವೇ ಅಧ್ಯಾತ್ಮ" ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ. ಗುರುದೇವ ಶ್ರೀರಾಮಕೃಷ್ಣ ಪರಮಹಂಸರೂ ಶಾಸ್ತ್ರಗಳನ್ನು 'ಕೈಮರ' ಎಂದು ಕರೆದಿದ್ದಾರೆ. ಅವು ಕೇವಲ ಕೈಮರದಂತೆ ಸೇರಬೇಕಾದ ನೆಲೆಯ ಗುರಿಗೆ ಕೈಮಾಡಿ ತೋರಿಸುತ್ತವೆ, ಅಷ್ಟೇ. ಆ ದಾರಿಯಲ್ಲಿ ಸಾಗಿ ಗುರಿ ಸೇರಬೇಕಾದ ಹೊಣೆ, ಜವಾಬ್ದಾರಿ ನಮ್ಮದೆ. ಅಲ್ಲಿ ಅನುಷ್ಠಾನಕ್ಕೆ ಮಾತ್ರ ಪ್ರಾಮುಖ್ಯತೆ. "ಭಾಂಗ್ ಭಾಂಗ್ ಎನ್ನುತ್ತಿದ್ದರೆ ಮತ್ತು ಬರುವುದಿಲ್ಲ, ಅದನ್ನು ಅರೆದು ಸೇವಿಸಿದಾಗ ಮಾತ್ರ ಮತ್ತು ಬರುತ್ತದೆ" ಎನ್ನುತ್ತಾರೆ ಶ್ರೀರಾಮಕೃಷ್ಣರು. ಬಾಹ್ಯ ಪರಿಕರಗಳಾದ ಮಾಧ್ಯಮಗಳು ಮಾತು, ಮನಸ್ಸುಗಳನ್ನು ಮೀರಿದ ಅತೀಂದ್ರಿಯವಾದ ಅನಂತ ವಸ್ತುವನ್ನು ಪರಿಪೂರ್ಣವಾಗಿ ವಿವರಿಸಲಾರವು. ಅದು ಕೇವಲ ಅನುಭವವೇದ್ಯವಾದುದು. ಸಮಾಧಿಸ್ಥಿತಿಯನ್ನು ಶ್ರೀರಾಮಕೃಷ್ಣರಿಗೆ ವಿವರಿಸಲಾಗಲಿಲ್ಲ; ಪ್ರವಚನದಿಂದಾಗಲಿ, ಪಾಂಡಿತ್ಯದಿಂದಲಾಗಲಿ, ಅನೇಕ ಬಾರಿ ಕೇಳುವುದರಿಂದಲಾಗಲಿ ಆತ್ಮವು ಸಿಕ್ಕುವುದಿಲ್ಲ ಎಂದು ಉಪನಿಷತ್ತುಗಳೂ ಹೇಳುತ್ತವೆ.

ವ್ಯಕ್ತಿಯಲ್ಲಿ ಅಧ್ಯಾತ್ಮದ ಅಪೇಕ್ಷೆಯ ಬೀಜವನ್ನು ಬಿತ್ತುವಂತಹ ಮಹತ್ಕಾರ್ಯವನ್ನು ನಿರ್ವಹಿಸುವ ಮಾಧ್ಯಮಗಳ ನಿರ್ವಾಹಕನು ಅದಕ್ಕೆ ಬೇಕಾದ ಸಾಮರ್ಥ್ಯ, ಯೋಗ್ಯತೆ, ನೈಪುಣ್ಯಗಳನ್ನು ಗಳಿಸಿರಬೇಕು. ಮೊದಲಿಗೆ ಅವನು ಸ್ವತಃ ಅಧ್ಯಾತ್ಮದ ವಸ್ತುಸ್ವರೂಪವನ್ನು ತಿಳಿದವನಾಗಿರಬೇಕು. ಸ್ವಸ್ವ-ರೂಪಾಸಂಧಾನವಿಲ್ಲದಿರುವ ಅಜ್ಞಾನಿಗೆ ಈ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸುವುದು ಕಷ್ಟವಾಗುತ್ತದೆ. ಅಲ್ಲಿ ಇಲ್ಲಿ ಕೇಳಿದ, ಓದಿದ, ಏನನ್ನೋ ಅಲ್ಪ ಸ್ವಲ್ಪ ತಿಳಿದುಕೊಂಡು ವಸ್ತುವನ್ನು ನಿಜವಾಗಿ ಅರಿಯದವನು ಮಾಧ್ಯಮಗಳ ನಿರ್ವಹಣೆ ಮಾಡಹೊರಟರೆ, **'ಅಂಧೇನೈವ ನೀಯಮಾನಾ ಯಥಾಂಧಾಃ' – ಕುರುಡನಿಂದ ಕರೆದೊಯ್ಯಲ್ಪಟ್ಟ ಮತ್ತೊಬ್ಬ ಕುರುಡ** ಎಂಬಂತೆ ಸಾಮೂಹಿಕವಾಗಿ ಸರ್ವನಾಶವಾಗುತ್ತದೆ. ಈ ನೆಲೆಯಲ್ಲಿ ಮಾಧ್ಯಮದ ಜವಾಬ್ದಾರಿ ಪ್ರಮುಖವಾದುದು, ಗಂಭೀರವಾದುದು. ಮಾನವೀಯತೆಯನ್ನು ಮರೆತು ಹಿಂಸೆ, ದುರಾಚಾರಗಳಿಂದ ತೊಳಲುತ್ತಿರುವ ಜನತೆಯನ್ನು ಮೇಲೆತ್ತಿ, ಶಾಂತಿ ಸುಖ ನೆಮ್ಮದಿಗಳು ನೆಲೆಸುವಂತೆ ಮಾಧ್ಯಮಗಳು ಪ್ರೇರಣೆ ನೀಡಬಲ್ಲವು. ಇದೇ ಮಾಧ್ಯಮಗಳ ಕರ್ತವ್ಯ ಕೂಡ.

## ಡಾ. ರೂಪಾ

*(ಮೈಸೂರಿನ ಮಹಾರಾಜ ಕಾಲೇಜಿನ ಸಂಸ್ಕೃತ ವಿಭಾಗದ ಮುಖ್ಯಸ್ಥರಾಗಿರುವ ಲೇಖಕಿ ಸಂಸ್ಕೃತ ಸಾಹಿತ್ಯದಲ್ಲಿ ಪರಿಣತರು; ಆಶ್ರಮದ ಭಕ್ತರು.)*

'ಅಧ್ಯಾತ್ಮ' ಎಂಬ ಪದಕ್ಕೆ 'ಆತ್ಮವನ್ನು ಕುರಿತು', 'ಪರಮಾತ್ಮನನ್ನು ಕುರಿತು', 'ಪರಬ್ರಹ್ಮವನ್ನು ಕುರಿತು', 'ಆತ್ಮದ ಸಂಬಂಧವಾಗಿ', 'ಪರಬ್ರಹ್ಮ ಸಂಬಂಧವಾಗಿ', 'ಪರಮಾತ್ಮನ ಸಂಬಂಧವಾಗಿ', 'ಆತ್ಮದ ವಿಷಯವಾಗಿ, 'ಪರಬ್ರಹ್ಮವಿಷಯವಾಗಿ', 'ಆತ್ಮಜ್ಞಾನ', 'ಪರಬ್ರಹ್ಮ ಜ್ಞಾನ' ಎಂಬ ಹಲವು ಅರ್ಥಗಳಿವೆ.

ಅಧ್ಯಾತ್ಮ ಏಕೆ ಬೇಕು? ಅಧ್ಯಾತ್ಮದ ಆವಶ್ಯಕತೆ ಏನಿದೆ? ಅಧ್ಯಾತ್ಮದಿಂದ, ಯಾವುದಕ್ಕಿಂತ ಹೆಚ್ಚಿನದು ಇಲ್ಲವೇ ಇಲ್ಲವೋ ಅಂತಹ ಆತ್ಯಂತಿಕ ಸುಖ ಎಂಬ ಅತ್ಯಂತ ಉತ್ಕೃಷ್ಟವಾದ ಪ್ರಯೋಜನವಿದೆ ಮತ್ತು ಈ ಆತ್ಯಂತಿಕ ಸುಖವನ್ನು ಬೇರೆ ಯಾವುದರಿಂದಲೂ ಪಡೆಯಲು ಸಾಧ್ಯವಿಲ್ಲ. ಅಧ್ಯಾತ್ಮದಿಂದ ದ್ವೇಷ, ಅಸೂಯೆ ಇತ್ಯಾದಿ ನಕಾರಾತ್ಮಕ ಭಾವನೆಗಳು ಇಲ್ಲವಾಗಿ ಯಾವುದೋ ಒಂದು ಅನಿರ್ವಚನೀಯವಾದ ಆನಂದದ ಅನುಭವವಾಗುತ್ತದೆ. ಮಾನಸಿಕ ಒತ್ತಡಗಳು ಇಲ್ಲವಾಗಿ ಮನಃಶಾಂತಿ ಲಭಿಸುತ್ತದೆ. ಬಾಹ್ಯದಲ್ಲಿ ಎಷ್ಟೇ ಏರುಪೇರುಗಳಿದ್ದರೂ ಆಂತರ್ಯದಲ್ಲಿ ಶಾಂತಿಯಿಂದಿರುವ ಕಲೆಯನ್ನು ಅಧ್ಯಾತ್ಮ ಕಲಿಸುತ್ತದೆ. ಜೀವನದಲ್ಲಿ ಯಾವುದೇ ರೀತಿಯ ಕಷ್ಟಗಳು ಬಂದರೂ, ಎಷ್ಟೇ ಕಷ್ಟಗಳು ಬಂದರೂ ಅವುಗಳನ್ನು ಶಾಂತಿ–ಧೈರ್ಯ–ಸ್ಥೈರ್ಯಗಳಿಂದ ಎದುರಿಸುವ ಶಕ್ತಿ–ಸಾಮರ್ಥ್ಯಗಳು ಅಧ್ಯಾತ್ಮದಿಂದ ಉಂಟಾಗುತ್ತವೆ. ಇದರಿಂದ ದುಃಖರಹಿತ ಸ್ಥಿತಿ ಉಂಟಾಗುತ್ತದೆ. ಇವು ವ್ಯಕ್ತಿಯ ಮೇಲೆ ಅಧ್ಯಾತ್ಮದಿಂದ ಉಂಟಾಗುವ ಪರಿಣಾಮಗಳು.

ಸಮಾಜದಲ್ಲಿರುವ ವ್ಯಕ್ತಿಗಳು ಅಧ್ಯಾತ್ಮಪ್ರವೃತ್ತರಾಗುವುದರಿಂದ ಸಮಾಜದಲ್ಲಿ ಸುಖ–ಶಾಂತಿಗಳು ನೆಲಸುತ್ತವೆ. ಸಮಾಜದಲ್ಲಿನ ಅನೇಕ ಸಮಸ್ಯೆಗಳಿಗೆ ದ್ವೇಷ, ಅಸೂಯೆ, ಮೋಹ, ದುರಾಸೆ – ಇತ್ಯಾದಿಗಳೇ ಕಾರಣ. ಅಧ್ಯಾತ್ಮದಿಂದ ಇವು ಇಲ್ಲವಾಗುತ್ತವೆ. ಇದರಿಂದ, ಅಶಾಂತಿಕಾರಕಗಳಾದ ಹಿಂಸೆ–ಕ್ರೌರ್ಯ–ಕಲಹ–ಗಲಭೆಗಳು ಇಲ್ಲವಾಗುತ್ತವೆ. ಆ ಮೂಲಕ ಸಮಾಜದಲ್ಲಿ ಸುಖ–ಶಾಂತಿಗಳು ನೆಲಸುತ್ತವೆ.

ಹೀಗೆ ಅಧ್ಯಾತ್ಮದಿಂದ ವ್ಯಕ್ತಿಗೂ, ಸಮಾಜಕ್ಕೂ ಆಗುವ ಪ್ರಯೋಜನಗಳು ಅನೇಕ ಹಾಗೂ ಅಪಾರ. ಅಧ್ಯಾತ್ಮದ ಅಭಾವ ಅನೇಕ ಸಮಸ್ಯೆಗಳ, ಅಸುಖದ, ಅಶಾಂತಿಗಳ ಉದ್ಭವಕ್ಕೆ ದಾರಿ ಮಾಡಿಕೊಡುತ್ತದೆ. ಇವು ಉಂಟಾಗದಿರುವುದಕ್ಕೆ ಅಧ್ಯಾತ್ಮದ ಆವಶ್ಯಕತೆ ಇದ್ದೇ ಇದೆ.

ಈ ಎಲ್ಲ ಕಾರಣಗಳಿಂದ ಸಮಾಜದಲ್ಲಿನ ಪ್ರತಿಯೊಬ್ಬ ವ್ಯಕ್ತಿಯೂ ಅಧ್ಯಾತ್ಮವನ್ನು ಬಯಸಬೇಕು, ಆಧ್ಯಾತ್ಮಿಕ ಮಾರ್ಗದಲ್ಲಿ ಪ್ರವೃತ್ತನಾಗಬೇಕು.

'ಮಾಧ್ಯಮ' ಎಂದರೆ 'ಮಧ್ಯದಲ್ಲಿರುವ' ಎಂದರ್ಥ. 'ಅಧ್ಯಾತ್ಮ ಮತ್ತು ಮಾಧ್ಯಮ' ಎಂಬಲ್ಲಿ 'ಮಾಧ್ಯಮ' ಎಂದರೆ 'ಅಧ್ಯಾತ್ಮಕ್ಕೂ ಅಧ್ಯಾತ್ಮಜ್ಞಾನವನ್ನು ಪಡೆಯುವವನಿಗೂ ಮಧ್ಯೆ ಇರುವ' ಎಂದು ಅರ್ಥಮಾಡಿಕೊಳ್ಳಬಹುದು. ಅಂದರೆ, ಮಾಧ್ಯಮ ಎಂಬುದು ಅಧ್ಯಾತ್ಮವನ್ನು ಪಡೆಯಲು ಅಥವಾ ತಲುಪಿಸಲು ಇರುವ ಒಂದು ಸಾಧನ. ಯಾವುದರ ಮೂಲಕ ಪಡೆಯಲಾಗುತ್ತದೆಯೋ ಅಥವಾ ತಲುಪಿಸಲಾಗುತ್ತದೆಯೋ ಅದು 'ಮಾಧ್ಯಮ'. ಜ್ಞಾನವನ್ನು ಬೇರೆಯವರಿಗೆ ಕೊಡುವಾಗ ಅಥವಾ ಬೇರೆಯವರಿಂದ ಪಡೆಯುವಾಗ ಮಾಧ್ಯಮದ ಆವಶ್ಯಕತೆ ಇದೆ. ಕೊಡುವಿಕೆ ಅಥವಾ ಪಡೆಯುವಿಕೆ – ಇವೆರಡೂ ಇಲ್ಲದಿರುವಾಗ ಮಾಧ್ಯಮದ ಆವಶ್ಯಕತೆ ಇರುವುದಿಲ್ಲ.

ವೇದಗಳಲ್ಲಿ, ವೇದಾಂತಗಳಲ್ಲಿ, ಆತ್ಮಜ್ಞಾನಿಗಳಲ್ಲಿ, ಬ್ರಹ್ಮಜ್ಞಾನಿಗಳಲ್ಲಿ ಅಧ್ಯಾತ್ಮ ಶಕ್ತಿ ಇರುತ್ತದೆ. ಅಧ್ಯಾತ್ಮವನ್ನು ಪಡೆಯುವುದಕ್ಕೆ ಇರುವ ಮಾಧ್ಯಮಗಳು– **ಶ್ರವಣ, ಪಠನ ಮತ್ತು ದರ್ಶನ**. 'ಶ್ರವಣ' ಎಂದರೆ ಅಧ್ಯಾತ್ಮವಿಷಯಕ ಶ್ರವಣ. ಅಂದರೆ, ವೇದಗಳನ್ನು, ವೇದಗಳ ಅರ್ಥವನ್ನು ಕೇಳುವುದು; ಆಧ್ಯಾತ್ಮಿಕ ಪ್ರವಚನಗಳನ್ನು ಕೇಳುವುದು; ಆತ್ಮವಿಷಯದಲ್ಲಿ ಸಂದೇಹ ಬಂದಾಗ ಆತ್ಮಜ್ಞಾನಿಯನ್ನು ಪ್ರಶ್ನಿಸಿ ಅವರು ಕೊಡುವ ಉತ್ತರಗಳನ್ನು ಆಲಿಸುವುದು; ಜ್ಞಾನಿ–ಜಿಜ್ಞಾಸುಗಳ ನಡುವೆ ನಡೆಯುವ ಪ್ರಶ್ನೋತ್ತರಗಳನ್ನೂ ಸಂವಾದಗಳನ್ನೂ ಕೇಳುವುದು; ಅಧ್ಯಾತ್ಮಗೀತೆಗಳನ್ನೂ ಭಜನೆಗಳನ್ನೂ ಕೇಳುವುದು – ಇವೆಲ್ಲ '**ಶ್ರವಣ**'. ಪ್ರಾಚೀನ ಕಾಲದಲ್ಲಿ ಈ 'ಶ್ರವಣ' ಗುರು–ಶಿಷ್ಯರ ನಡುವೆ ಮಾತ್ರ ಸಾಧ್ಯವಾಗುತ್ತಿತ್ತು. ಇಂದು ಆಧ್ಯಾತ್ಮಿಕ ವಚನ–ಪ್ರವಚನ ಗೀತಾದಿಗಳ ಧ್ವನಿಮುದ್ರಿಕೆಗಳು (cassettes), ಸಾಂದ್ರ ಧ್ವನಿಮುದ್ರಿಕೆಗಳು (C.D) ಇತ್ಯಾದಿಗಳು ಈ 'ಶ್ರವಣ' ಮಾಧ್ಯಮಗಳಾಗಿವೆ. ಈಚಿನ ದಿನಗಳಲ್ಲಿ ನೂತನ ಮಾಧ್ಯಮವಾದ

ಜಾಲಪುಟ/ ಅಂತರ್ಜಾಲ (internet) ಕೂಡ ಈ 'ಶ್ರವಣ'ಕ್ಕೆ ಮಾಧ್ಯಮವಾಗಿದೆ. ಸಮೂಹ ಮಾಧ್ಯಮವಾದ ಆಕಾಶವಾಣಿಯ ಮೂಲಕ ಪ್ರಸಾರವಾಗುವ ಆಧ್ಯಾತ್ಮಿಕ ಕಾರ್ಯಕ್ರಮಗಳ ಮೂಲಕವೂ ಈ 'ಶ್ರವಣ' ಸಾಧ್ಯ.

'ಶ್ರವಣ'ದ ಇನ್ನೊಂದು ರೂಪವೇ **'ಪಠನ'**. ಪಠನ ಎಂದರೆ, 'ಅಧ್ಯಾತ್ಮವಿಷಯಕ ಸಾಹಿತ್ಯವನ್ನು ಓದುವುದು', 'ಶ್ರವಣದಲ್ಲಿ ಹೇಳಿದವುಗಳೇ ಬರವಣಿಗೆಯಲ್ಲಿರುವಾಗ ಅಥವಾ ಆ ಬರವಣಿಗೆ ಯಲ್ಲಿರುವುದು ಮುದ್ರಿತವಾಗಿರುವಾಗ ಅದನ್ನು ಓದುವುದೇ 'ಪಠನ' ಎನ್ನಿಸಿಕೊಳ್ಳುತ್ತದೆ. ಆಧ್ಯಾತ್ಮಿಕ ಪುಸ್ತಕಗಳು, ಪತ್ರಿಕೆಗಳು ಮತ್ತು ನೂತನ ಮಾಧ್ಯಮವಾದ ಅಂತರ್ಜಾಲವೂ ಈ 'ಪಠನ'ಕ್ಕೆ ಮಾಧ್ಯಮವಾಗಿವೆ. ಸಮೂಹಮಾಧ್ಯಮವಾದ ಮುದ್ರಣ ಮಾಧ್ಯಮದ ದಿನಪತ್ರಿಕೆಗಳೂ ನಿಯತಕಾಲಿಕೆಗಳೂ ಈ 'ಪಠನ' ಸಾಮಗ್ರಿಯನ್ನು ಒದಗಿಸುವ ಮಾಧ್ಯಮಗಳಾಗಿವೆ.

ಅಧ್ಯಾತ್ಮಸಂಬಂಧವಾದ ಸ್ತಬ್ಧಚಿತ್ರಗಳನ್ನೂ, ಚಲನಚಿತ್ರಗಳನ್ನೂ ನೋಡುವುದು **'ದರ್ಶನ'**. ಇಂದಿನ ದಿನಗಳಲ್ಲಿ ಸ್ತಬ್ಧ ಹಾಗೂ ಚಲನಚಿತ್ರಗಳ ಮುದ್ರಿಕೆಗಳು (video cassettes) ಹಾಗೂ ಸಾಂದ್ರ ಮುದ್ರಿಕೆಗಳು ಈ 'ದರ್ಶನ' ಕ್ಕೆ ಮಾಧ್ಯಮಗಳಾಗಿವೆ. ಅತ್ಯಾಧುನಿಕ ಮಾಧ್ಯಮವಾದ ಅಂತರ್ಜಾಲದ ಮೂಲಕವೂ ಈ 'ದರ್ಶನ' ಸಾಮಗ್ರಿಗಳನ್ನು ಪಡೆಯಬಹುದು. ಸಮೂಹಮಾಧ್ಯಮವಾದ ದೂರದರ್ಶನದ ಮೂಲಕ ಪ್ರಸಾರವಾಗುವ ಆಧ್ಯಾತ್ಮಿಕ ಚಲನ ಚಿತ್ರಗಳು, ಪ್ರವಚನಗಳೇ ಮೊದಲಾದ ಆಧ್ಯಾತ್ಮಿಕ ಕಾರ್ಯ ಕ್ರಮಗಳು – ಇವು 'ದರ್ಶನ' ಮಾಧ್ಯಮಕ್ಕೆ ನಿದರ್ಶನಗಳಾಗಿವೆ.

ಸಮೂಹಮಾಧ್ಯಮಗಳಾದ ಮುದ್ರಣ ಮಾಧ್ಯಮ, ಆಕಾಶ ವಾಣಿ, ದೂರದರ್ಶನ – ಇವು ಅತ್ಯಂತ ಪ್ರಬಲ ಹಾಗೂ ಪರಿಣಾಮಕಾರಿ. ಇವುಗಳಲ್ಲೂ ದೂರದರ್ಶನ ಹೆಚ್ಚು ಪ್ರಬಲ ಹಾಗೂ ಪರಿಣಾಮಕಾರಿ. ಈ ಸಮೂಹ ಮಾಧ್ಯಮಗಳು ಏಕಕಾಲದಲ್ಲಿ ಅತ್ಯಧಿಕ ಸಂಖ್ಯೆಯ ಜನಸಮೂಹಕ್ಕೆ ಮಾಹಿತಿಯನ್ನು ಒದಗಿಸುವುದರಿಂದ, ಇವುಗಳಿಂದ ಪ್ರಭಾವಿತರಾಗುವ ಜನರ ಸಂಖ್ಯೆಯೂ ಅಧಿಕ. ಆದ್ದರಿಂದ, ಅಧ್ಯಾತ್ಮವನ್ನು ಸಮೂಹ ಮಾಧ್ಯಮಗಳ ಮೂಲಕ ಪ್ರಸಾರ ಮಾಡಿದರೆ ಅದು ಬಹು ಜನರಿಗೆ ತಲುಪುತ್ತದೆ. ಈ ಮಾಧ್ಯಮಗಳ ಮೂಲಕ ಪ್ರಸಾರ ವಾಗುವ ಲೇಖನಗಳು, ವಾರ್ತೆಗಳು, ಕಾರ್ಯಕ್ರಮಗಳು ಇಡೀ ಸಮಾಜದ ಮೇಲೆ ಪ್ರಭಾವ ಬೀರುತ್ತವೆ. ಉತ್ತಮ ಲೇಖನಗಳನ್ನೂ, ಉತ್ತಮ ಕಾರ್ಯಕ್ರಮಗಳನ್ನೂ ಇವು ಪ್ರಸಾರ ಮಾಡಿದರೆ ಸಮಾಜದ ಮೇಲೆ ಉತ್ತಮ ಪರಿಣಾಮವಾಗುತ್ತದೆ. ಇವು ಪ್ರಸಾರ ಮಾಡುವ ಲೇಖನಗಳು, ಕಾರ್ಯಕ್ರಮಗಳು ಕೆಟ್ಟದಾಗಿದ್ದು, ಅಶಾಂತಿಕಾರಕವಾಗಿದ್ದರೆ ಸಮಾಜದ ಮೇಲೆ ಕೆಟ್ಟ ಪರಿಣಾಮವಾಗುತ್ತದೆ. ಆದ್ದರಿಂದ, ಸಮೂಹ ಮಾಧ್ಯಮಗಳಿಂದ ಸಮಾಜಕ್ಕೆ ಉಪಕಾರವೂ ಆಗಬಹುದು, ಅಪಕಾರವೂ ಆಗ ಬಹುದು. ಹೀಗಾಗಿ ಸಮಾಜದ ಹಿತವನ್ನು ಸಾಧಿಸುವ ಹಾಗೂ ಸಮಾಜದ ಸುಸ್ಥಿತಿಯನ್ನು ಕಾಪಾಡುವ ಹೊಣೆಗಾರಿಕೆ ಸಮೂಹ ಮಾಧ್ಯಮಗಳದ್ದು.

ಅಧ್ಯಾತ್ಮ ಸಮಾಜಕ್ಕೆ ಹಿತವನ್ನು ಮಾಡುತ್ತದೆ, ಅಹಿತವನ್ನು ಮಾಡುವುದಿಲ್ಲ. ಅಧ್ಯಾತ್ಮದಿಂದ ಸಮಾಜ ಸುಸ್ಥಿತಿಯಲ್ಲಿರುತ್ತದೆ, ದುಃಸ್ಥಿತಿಯಲ್ಲಿರುವುದಿಲ್ಲ. ಆದ್ದರಿಂದ ಈ ಸಮೂಹ ಮಾಧ್ಯಮಗಳು ಸಮಾಜದ ಹಿತವನ್ನೂ ಸುಸ್ಥಿತಿಯನ್ನೂ ದೃಷ್ಟಿಯಲ್ಲಿಟ್ಟುಕೊಂಡು ಅಧ್ಯಾತ್ಮವನ್ನು ಪ್ರಸಾರ ಮಾಡುವುದಕ್ಕಾಗಿ ಅಧ್ಯಾತ್ಮವಿಷಯಕ ಲೇಖನಗಳನ್ನೂ, ಅಧ್ಯಾತ್ಮ ಬೋಧಕ ಕಾರ್ಯಕ್ರಮಗಳಾದ ಜ್ಞಾನಿಗಳ ವಚನ–ಪ್ರವಚನ ಮುಂತಾದವುಗಳನ್ನೂ, ಅಧ್ಯಾತ್ಮ ಕೇಂದ್ರಿತ ಗೀತನೃತ್ಯಾದಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ಹೆಚ್ಚಾಗಿ ಪ್ರಸಾರ ಮಾಡಬೇಕು. ಕಾಮಪ್ರಚೋದಕವಾದ, ಭೋಗಪ್ರಧಾನವಾದ ವಿಷಯಗಳು, ಲೇಖನಗಳು, ಹಿಂಸೆ–ಕ್ರೌರ್ಯಗಳನ್ನು ತೋರಿಸುವ ಕಾರ್ಯಕ್ರಮಗಳು, ಅಶ್ಲೀಲತೆಯ ಪ್ರದರ್ಶನಗಳು ಸಮಾಜದ ಮೇಲೆ ದುಷ್ಪರಿಣಾಮವನ್ನು ಬೀರುತ್ತವೆ; ಸಮಾಜದ ಅಶಾಂತಿಗೆ, ದುಃಸ್ಥಿತಿಗೆ ಇವು ಕಾರಣವಾಗುತ್ತವೆ. ಆದ್ದರಿಂದ ಇವುಗಳ ಪ್ರಸಾರ ಮಾಡದೆ, ಸಮಾಜದ ಮೇಲೆ ಸತ್ಪರಿಣಾಮವನ್ನುಂಟುಮಾಡುವ, ಸಮಾಜಕ್ಕೆ ಹಿತಕಾರಿಯಾದ, ಸಮಾಜದಲ್ಲಿ ಶಾಂತಿ ನೆಲಸುವಂತೆ ಮಾಡುವ ಆಧ್ಯಾತ್ಮಿಕ ವಿಷಯಗಳನ್ನೂ ಕಾರ್ಯಕ್ರಮಗಳನ್ನೂ ಮಾಧ್ಯಮಗಳು ಹೆಚ್ಚಾಗಿ ಪ್ರಸಾರ ಮಾಡಿದರೆ, ಆಗ ಸಮಾಜದ ಶಾಂತಿ–ಸುಖ–ಸುಸ್ಥಿತಿಗಳನ್ನು ಸಾಧಿಸಬಹುದು.

## ಪ್ರೊ. ಕೆ.ಬಿ. ಪ್ರಭುಪ್ರಸಾದ್

*(ವಿಚಾರ ಸಂಕಿರಣದ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀಯುತರು ನಿವೃತ್ತ ಕಾಲೇಜು ಪ್ರಾಂಶುಪಾಲರು; ಕನ್ನಡದ ಗಣ್ಯ ಲೇಖಕರು; ಆಶ್ರಮದ ಭಕ್ತರು. )*

ನಮ್ಮ ಬದುಕಿನ ಪರಮಗುರಿಯಾದ ಪರಿಪೂರ್ಣತೆಯೆಡೆಗೆ ಮುನ್ನಡೆಸುವ ಅಧ್ಯಾತ್ಮದ ಬೆಳಕಿನಲ್ಲಿ ವಿಕಾಸಗೊಳ್ಳುವುದೇ ಸಾರ್ಥಕ ಜೀವನ. ವೈಯಕ್ತಿಕ ಸಾಧನೆಗೂ ಸಾಮಾಜಿಕ ಸುಸ್ಥಿತಿಗೂ ಆವಶ್ಯಕವಾದ ಆಧ್ಯಾತ್ಮಿಕ ವಿಚಾರಗಳನ್ನು ಬಿತ್ತರಿಸುವುದರಲ್ಲಿ ಇಂದಿನ ಸಮೂಹ ಮಾಧ್ಯಮಗಳ ಪಾತ್ರ ಬಹಳ ಮಹತ್ವದ್ದು. ಇದೊಂದು ಜವಾಬ್ದಾರಿಯುತ ಸಾಮಾಜಿಕ ಕರ್ತವ್ಯ ಕೂಡ. ಆದರೆ, ಮಾಧ್ಯಮಗಳು ಈ ಕಾರ್ಯವನ್ನು ಮಾಡುತ್ತಿವೆಯೇ? ಅವುಗಳ ಪಾತ್ರ ತೃಪ್ತಿಕರವಾಗಿಲ್ಲ ಎಂದರೆ ಎಲ್ಲಿ ದೋಷವಿದೆ? ಮಾಧ್ಯಮಗಳಲ್ಲೆ? ಜನರಲ್ಲೇ? ಅಥವಾ ಅಧ್ಯಾತ್ಮ ವಿಚಾರಗಳ ಸಂವಹನದಲ್ಲೇ? – ಈ ಪ್ರಶ್ನೆಗಳಿಗೆ ಉತ್ತರ ಹುಡುಕುವ ಪ್ರಯತ್ನವೇ ಈ ವಿಚಾರ ಸಂಕಿರಣ.

ಇದರಲ್ಲಿ ಭಾಗವಹಿಸುತ್ತಿರುವವರೆಲ್ಲರೂ ವಿದ್ವಾಂಸರು, ಬಹುಶ್ರುತರು, ಒಳ್ಳೆಯ ವಾಗ್ಮಿಗಳು, ಚಿಂತನಶೀಲರು. ನಿಜಕ್ಕೂ ಇದೊಂದು ವಿದ್ವತ್ಸಭೆ. ಆಶ್ರಮದ ಸಾಧುಗಳ, ಭಕ್ತರೂ, ಸಜ್ಜನರೂ ಆದ ವಿದ್ವಾಂಸರ ಹಾಗೂ ನಿಮ್ಮೆಲ್ಲರ ಸತ್ಸಂಗದಲ್ಲಿರುವುದೇ ಒಂದು ಭಾಗ್ಯ. ಜೊತೆಗೆ ಸಭೆಯ ಅಧ್ಯಕ್ಷತೆಯ ದೊಡ್ಡ ಗೌರವ ಬೇರೆ! ಶ್ರೀಗುರುಮಹಾರಾಜರ ಈ ಕೃಪೆಗೆ, ಆಶ್ರಮದ ಅಧ್ಯಕ್ಷರಾದ ಸ್ವಾಮಿ ನಿತ್ಯಸ್ಥಾನಂದಜಿ ಮಹಾರಾಜರ ವಾತ್ಸಲ್ಯಕ್ಕೆ ಕೃತಜ್ಞನಾಗಿದ್ದೇನೆ.

ಡಾ. ಸಿ.ಪಿ. ಕೃಷ್ಣಕುಮಾರ್ ಅವರು ಸಮಯದ ಔಚಿತ್ಯವನ್ನು ಮೀರದೆ, ಯಾವ ಲೋಪವೂ ಇಲ್ಲದ ಪ್ರಾಸ್ತಾವಿಕ ನುಡಿಗಳಲ್ಲಿ ಅಧ್ಯಾತ್ಮ ಮತ್ತು ಮಾಧ್ಯಮಗಳೆರಡನ್ನೂ ಸೊಗಸಾಗಿ, ಸಂಕ್ಷಿಪ್ತವಾಗಿ ಮತ್ತು ಅಚ್ಚುಕಟ್ಟಾಗಿ ವಿವರಿಸಿ, ಚಿಂತನ–ಮಂಥನಗಳಿಗೆ ಚಾಲನೆ ನೀಡಿದ್ದಾರೆ. ಅವರ ಮನನಯೋಗ್ಯವಾದ ಮಾತುಗಳನ್ನು ಗಮನಿಸಿರಿ: ಅಧ್ಯಾತ್ಮ ಆಂತರಂಗಿಕವಾದುದು. ವೈಯಕ್ತಿಕ ಸಾಧನೆ, ಅನುಭವ ಇಲ್ಲಿ ಮುಖ್ಯ. ಅಧ್ಯಾತ್ಮದ ವ್ಯಕ್ತರೂಪವೇ ಧರ್ಮ ಎಂದು ಗ್ರಹಿಸುವುದು ಪ್ರಸ್ತುತ. ಧರ್ಮ ಬಹಿರ್ಮುಖಿ. ಮಾಧ್ಯಮಗಳಿಗೆ ಪ್ರಾಶಸ್ತ್ಯ ಬರುವುದು ಧರ್ಮವನ್ನು ಜೀವನಮುಖಿ ಹಾಗೂ ಸಮಾಜಮುಖಿ ಎಂದು ಅರ್ಥೈಸಿದಾಗ ಮಾತ್ರ. ನಮ್ಮೀ ಕಾಲವನ್ನು ಮಾಧ್ಯಮಗಳ ಯುಗ ಎಂದೇ ಕರೆಯಬಹುದು. ಆಧುನಿಕ ಸಮೂಹ ಮಾಧ್ಯಮಗಳು ತುಂಬಾ ಪ್ರಭಾವಶಾಲಿ ಮತ್ತು ಪರಿಣಾಮಕಾರಿಗಳಾಗಿವೆ. ಅವುಗಳ ಸದುಪಯೋಗ ಮುಖ್ಯವಾದುದು. ವಾಸ್ತವದಲ್ಲಿ ಅವು ಅರ್ಥ–ಕಾಮಗಳಿಗೆ ಪ್ರಾಶಸ್ತ್ಯ ಕೊಟ್ಟು ವಿಕೃತಿಯನ್ನು ವೈಭವೀಕರಿಸುತ್ತ ದುರ್ಬಳಕೆಯಾಗುತ್ತಿರುವುದು ವಿಷಾದನೀಯ. ಹಾಗೆಂದು ಒಳ್ಳೆಯ ವಿಚಾರಗಳಿಗೆ, ಒಳ್ಳೆಯ ಸಂಗತಿ–ಸುದ್ದಿಗಳಿಗೆ ಅವು ಗಮನ ಕೊಡುವುದೇ ಇಲ್ಲ ಎಂದಲ್ಲ. ಅಂಥ ವಿಚಾರಗಳೂ ಇರುತ್ತವೆ. ಎಲ್ಲೋ ಒಂದು ಮೂಲೆಯಲ್ಲೋ, ಮರೆಯಲ್ಲೋ. ಮಾಧ್ಯಮಗಳು ಮಾಧುರ್ಯದ (ಮನರಂಜನೆ) ಜೊತೆಗೆ ಈ ಬಗೆಯ ಧರ್ಮದ ಒಳಬೆಳಕನ್ನು ತುಳುಕಿಸಿ ಎಲ್ಲರಿಗೂ ಮಾರ್ಗದರ್ಶನ ನೀಡಬೇಕು; ಶ್ರೀ ಗೋಪಾಲಕೃಷ್ಣ ಗೋಖಲೆಯವರು ಹೇಳುವಂತೆ, ಸಾರ್ವಜನಿಕ ಬದುಕು ಆಧ್ಯಾತ್ಮೀಕರಣವಾಗಬೇಕು. ಶ್ರೇಯಸ್ಸು–ಪ್ರೇಯಸ್ಸುಗಳ ಸಮನ್ವಯ ಇಂದಿನ ಅಗತ್ಯ. ಈ ದಿಸೆಯಲ್ಲಿ ಮಾಧ್ಯಮಗಳು ಹೊಣೆಯರಿತು ತಮ್ಮ ಪಾತ್ರವನ್ನು ನಿರ್ವಹಿಸಬೇಕು ಎಂದು ಡಾ. ಸಿ.ಪಿ.ಕೆ ಆಶಿಸಿದರು.

ಅನಂತರ ಒಂಬತ್ತು ಜನ ವಿದ್ವಾಂಸರ (*ಅದರಲ್ಲಿ ಆರು ಜನರ ಪ್ರಬಂಧಗಳನ್ನು ಮಾತ್ರ ಇಲ್ಲಿ ಪ್ರಕಟಿಸಲು ಸಾಧ್ಯವಾಗಿದೆ* –ಸಂ.) ಉಪನ್ಯಾಸಗಳನ್ನು ನಾವೆಲ್ಲರೂ ಆಸ್ಥೆಯಿಂದ ಕೇಳಿದ್ದೇವೆ. ಎಲ್ಲರೂ ತಮ್ಮ ತಮ್ಮ ಆಲೋಚನೆಗಳ ಬೆಳಕಿನಲ್ಲಿ ಅಧ್ಯಾತ್ಮದ ಬಗ್ಗೆ, ಮಾಧ್ಯಮಗಳ ಬಗ್ಗೆ ಅರ್ಥವಿವರಣೆ ಕೊಟ್ಟು, ಬಹಳ ಚೆನ್ನಾಗಿ ವಿಚಾರಗಳನ್ನು ಮಂಡಿಸಿದ್ದಾರೆ, ಎಳೆಎಳೆಯಾಗಿ ವಿಶ್ಲೇಷಣೆ ಮಾಡಿ ಸರಳವಾದ ಮಾತುಗಳಲ್ಲಿ ಮನನಕ್ಕೆ ಪ್ರಚೋದನೆ ನೀಡುವ ಆಲೋಚನೆಗಳನ್ನು ಮುಂದಿಟ್ಟಿದ್ದಾರೆ. ಇವರೆಲ್ಲರೂ ಸೇರಿ ಮಾಧ್ಯಮ ಮತ್ತು ಅಧ್ಯಾತ್ಮಗಳ ಬಗ್ಗೆ ಒಂದು ಸಮಗ್ರವಾದ ಚಿತ್ರಣ ವನ್ನೇ ಮೂಡಿಸಿದ್ದಾರೆ. ಆದ್ದರಿಂದ ಎಲ್ಲವನ್ನೂ ಕ್ರೋಡೀಕರಿಸಿ ಸಮಾರೋಪ ಮಾಡುವ ಕೆಲಸ ಸುಲಭವಾಗಿದೆ.

ಈ ಎಲ್ಲ ಉಪನ್ಯಾಸಗಳ ಸಮಾನಾಂಶಗಳನ್ನು ಮೊದಲು ಪ್ರಸ್ತಾಪಿಸಿ, ನಂತರ ಒಬ್ಬೊಬ್ಬರೂ ಹೇಳಿದ ವಿಶೇಷಾಂಶಗಳ ಕಡೆಗೆ ತಮ್ಮ ಗಮನ ಸೆಳೆಯಬಯಸುತ್ತೇನೆ. ಎಲ್ಲರ ಮಾತುಗಳಲ್ಲಿಯೂ ಅಧ್ಯಾತ್ಮದ ವಿವರಣೆ ಬಹುಮಟ್ಟಿಗೆ ಒಂದೇ ಇದ್ದು, ಹೇಳುವ ರೀತಿ ಮಾತ್ರ ಬೇರೆ ಬೇರೆ ಆಗಿದೆ. ಅಧ್ಯಾತ್ಮ ಆತ್ಮವನ್ನು ಕುರಿತದ್ದು, ಆತ್ಮ–ಪರಮಾತ್ಮರ ಸಂಬಂಧವನ್ನು ಕುರಿತದ್ದು, ಅಮೂರ್ತವಾದುದು, ಅತಿ ನಿಗೂಢವಾದುದು, ಮಾತಿಗೆ ಮನಸ್ಸಿಗೆ ಅತೀತವಾದದು. ಅಲ್ಲಿ ಅನುಭಾವ ಮುಖ್ಯ. ಇದನ್ನು ಮಾಧ್ಯಮ ವ್ಯಕ್ತಪಡಿಸಲು ಸಾಧ್ಯವಿಲ್ಲ. ಆದರೆ ಆಧ್ಯಾತ್ಮಿಕ ಮೌಲ್ಯಗಳಾದ ಸತ್ಯ, ಧರ್ಮ, ಪ್ರೇಮ, ಶಾಂತಿ, ಅಹಿಂಸೆಗಳ ಬಗ್ಗೆ, ಸಾಧನಾಕ್ರಮ–ವಿಧಾನಗಳ ಕುರಿತು ಅಭಿವ್ಯಕ್ತಿ ಸಾಧ್ಯ. ಇದು ಸಾಮಾನ್ಯವಾಗಿ ಅಂಗೀಕೃತವಾದ ಅರ್ಥವಿವರಣೆ.

ನಂತರ ದೃಶ್ಯ–ಶ್ರವ್ಯ–ಪಠ್ಯ ಮಾಧ್ಯಮಗಳ ಬಗ್ಗೆ, ಬಹು ಪ್ರಭಾವಶಾಲಿ ಆಧುನಿಕ ಮಾಧ್ಯಮಗಳನ್ನು ಕುರಿತು, ಅವು ವಾಸ್ತವ ವಾಗಿ ಮಾಡುತ್ತಿರುವ, ಆದರೆ ಮಾಡಬೇಕಾದ ಕಾರ್ಯಗಳ ಬಗ್ಗೆ ವಿವರವಾಗಿ ಹೇಳಿ, ಮಾಧ್ಯಮಗಳ ಸದ್ಬಳಕೆ ನಿರೀಕ್ಷಿತ ಮಟ್ಟದಲ್ಲಿ ಆಗುತ್ತಿಲ್ಲ; ಇದಕ್ಕೆ ಮಾಧ್ಯಮದವರಷ್ಟೆ, ಜನರ ಅಭಿರುಚಿ, ಒಲವು ಗಳೂ ಕಾರಣ ಎಂದು ಪ್ರಬಂಧಗಳನ್ನು ಮಂಡಿಸಿದ ವಿದ್ವಾಂಸರು ವಿಷಾದ ವ್ಯಕ್ತಪಡಿಸಿದ್ದಾರೆ.

ಇನ್ನು ವಿಶೇಷ ಅಂಶಗಳನ್ನು ಗಮನಿಸೋಣ. ಲೋಕಹಿತದೃಷ್ಟಿ–ಸಾಮಾಜಿಕ ಹೊಣೆ ಮಾಧ್ಯಮಗಳಿಗೆ ಮುಖ್ಯವಾಗಬೇಕು ಎಂಬುದು ಎಲ್ಲರ ಅಭಿಮತ. ಆದರೆ ಇದರಲ್ಲಿ ಹಲವು ತೊಡಕುಗಳು ಇವೆ. ಮಾಧ್ಯಮದ ಪ್ರತಿನಿಧಿಗಳಾಗಿ ಮಾತನಾಡಿದ ಶ್ರೀ ರಘು ಮತ್ತು ಶ್ರೀ ವಿಶ್ವನಾಥ ಪತ್ರಿಕೋದ್ಯಮದ ವ್ಯಾವಹಾರಿಕ ಕಷ್ಟ–ವಾಸ್ತವ ಸಮಸ್ಯೆಗಳನ್ನು ಸ್ವಾನುಭವದ ಆಧಾರದ ಮೇಲೆ ಮುಂದಿಟ್ಟಿದ್ದಾರೆ. ತಮ್ಮ ಈ ಇತಿಮಿತಿಗಳಲ್ಲೂ, ಜನರ ಮನೋಧರ್ಮವನ್ನು ತಿದ್ದುವಲ್ಲಿ, ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡುವಲ್ಲಿ, ಪತ್ರಿಕಾ ಧರ್ಮದ ಚೌಕಟ್ಟಿನಲ್ಲಿ ತಮ್ಮ ಪಾತ್ರ ಮತ್ತು ಕರ್ತವ್ಯಗಳನ್ನು ಪತ್ರಿಕೆಗಳು ಸಮರ್ಪಕವಾಗಿ ನಿರ್ವಹಿಸುತ್ತಿರುವುದನ್ನು ಅವರಿಬ್ಬರೂ ಎತ್ತಿ ತೋರಿಸಿದ್ದಾರೆ.

ಡಾ. ಎಚ್. ರಾಮಚಂದ್ರಸ್ವಾಮಿಯವರು, ಅಧ್ಯಾತ್ಮ ಎಂಬುದು ವಿಶ್ವವನ್ನೆಲ್ಲ ಒಳಗೊಂಡ ಸತ್ಯದರ್ಶನ, ಅನುಭಾವ, ತೀವ್ರ ಅಭೀಪ್ಸೆ; ಇದು ಕೇವಲ ಸಾಧನೆಯಿಂದ ಮಾತ್ರ ಸಾಧ್ಯ; ವೈಚಾರಿಕತೆಗೆ ಮೀರಿದ್ದಾದರೂ ವಿಚಾರ ವಿರೋಧಿ ಅಲ್ಲ ಎಂದು, ಅಧ್ಯಾತ್ಮದ ಸಾರವನ್ನು ಸೂತ್ರರೂಪದಲ್ಲಿ ವಿವರಿಸಿದರು. ಅದಲ್ಲದೆ, ಪ್ರಲೋಭನೆಗಳಿಗೆ ವಶವಾಗುವ ಯುವಜನರ ಮನಸ್ಸು ಆಧ್ಯಾತ್ಮಿಕ ಮೌಲ್ಯಗಳ ಕಡೆಗೆ ಆಕರ್ಷಿತವಾಗುವಂತಹ ಕಾರ್ಯಕ್ರಮಗಳನ್ನು, ಇಂದಿನ ಬದುಕಿಗೆ ಪ್ರಸ್ತುತವಾಗುವಂತೆ ರೂಪಿಸುವುದು ಮಾಧ್ಯಮಗಳ ಹೊಣೆ ಎಂದೂ, ಇದನ್ನು ಈಗಾಗಲೇ ಕೆಲವು ಪತ್ರಿಕೆಗಳು, ದೃಶ್ಯಮಾಧ್ಯಮಗಳು ಮಾಡುತ್ತಿವೆಯೆಂದೂ ಹೇಳಿದರು.

ಶ್ರೀ ಜಯದೇವ್ ಅವರು, ಅನ್ವಯಿಕ ಅಧ್ಯಾತ್ಮ ಎನ್ನಬಹುದಾದ, ಜೀವನದ ಮೌಲ್ಯಗಳಾದ ಇತ್ಯಾತ್ಮಕ ನಿಲುವು, ಜೀವನ ಪ್ರೀತಿ, ಆಲೋಚನಾ ಶಕ್ತಿ, ವೈಜ್ಞಾನಿಕ ದೃಷ್ಟಿಗಳನ್ನು ಬೆಳೆಸಿಕೊಳ್ಳಲು ಸಹಾಯಕವಾಧ ವಿಚಾರಗಳನ್ನು ಮಾಧ್ಯಮಗಳು ಆಕರ್ಷಕವಾಗಿ ಬಿತ್ತರಿಸಬೇಕು; ಉತ್ತಮ ಸಮಾಜ ನಿರ್ಮಾಣ ಮತ್ತು ಅದರ ಆರೋಗ್ಯ ಪಾಲನೆಗೆ ಅಧ್ಯಾತ್ಮ ಮತ್ತು ಮಾಧ್ಯಮಗಳ ಸಮ್ಮಿಲನ ಅಗತ್ಯ ಎಂದು ಹೇಳಿದರು.

ಆಧ್ಯಾತ್ಮಿಕ ವಿಚಾರಗಳನ್ನು ಶುಷ್ಕ ವೇದಾಂತ, ಶಾಸ್ತ್ರಗ್ರಂಥಗಳ ಅರ್ಥವಾಗದ ಶಬ್ದರಾಶಿಯಿಂದ ಮತ್ತು ಪಾರಿಭಾಷಿಕ ಪದಗಳ ಆಧಿಕ್ಯದಿಂದ ಮುಕ್ತಗೊಳಿಸಿ, ಮನಸ್ಸಿಗೆ ಹಿಡಿಯುವಂತೆ ಸ್ವಾರಸ್ಯವಾಗಿ ಅಭಿವ್ಯಕ್ತಿಸುವ ಕಲೆ, ಮಾಧ್ಯಮಗಳಿಗೆ ಕರಗತವಾಗಬೇಕು ಎಂಬ ಡಾ. ನಾಗರಾಜರಾವ್ ಅವರ ಮಾತು; ಅಧ್ಯಾತ್ಮವನ್ನು ಸಂವಹನ ಮಾಡಲಿಕ್ಕಾಗದಿದ್ದರೂ ವಿವೇಕವನ್ನಾದರೂ ಜಾಗೃತಗೊಳಿಸಬೇಕು ಎಂಬ ಡಾ. ರಾಮಚಂದ್ರಸ್ವಾಮಿಯವರ ಅಭಿಪ್ರಾಯ; ಮಾಧ್ಯಮ ಆಪ್ತಸಹಚರನಾಗಿ, ಸನ್ಮಿತ್ರನಂತೆ ಹೃದಯಕ್ಕೆ ಅನುಭವವನ್ನೂ, ಬುದ್ಧಿಗೆ ಬೆಳಕನ್ನೂ, ಜೀವಕ್ಕೆ ಪ್ರಚೋದನೆಯನ್ನೂ ನೀಡುವಂತಿರಬೇಕು ಎಂಬ ಡಾ. ಪ್ರಸನ್ನಾಕ್ಷಿ ಅವರ ಉಕ್ತಿ; ನಕಾರಾತ್ಮಕ ಭಾವನೆಗಳನ್ನು ನಷ್ಟಗೊಳಿಸಿ ಕಷ್ಟ–ಸಮಸ್ಯೆಗಳನ್ನು ಎದುರಿಸಬಲ್ಲ ಧೈರ್ಯ–ಸ್ಥೈರ್ಯಗಳನ್ನು ಉಂಟು ಮಾಡುವುದೇ ಅಧ್ಯಾತ್ಮ – ಅದರ ಹಿತಕರ ಪ್ರಸಾರಕ್ಕೆ ಮಾಧ್ಯಮಗಳು ಹೆಚ್ಚು ಗಮನ ಕೊಡಬೇಕು ಎಂಬ ಡಾ. ರೂಪಾ ಅವರ ನುಡಿ – ಇವೆಲ್ಲವೂ ಅನುಷ್ಠಾನಪ್ರೇರಕಗಳಾಗಿ ಮನಸ್ಸಿನಲ್ಲಿ ಉಳಿಯುತ್ತವೆ.

ಕೊನೆಯಲ್ಲಿ ನನ್ನ ಎರಡು ಮಾತುಗಳು: ಉತ್ತಮ ಸುಸಂಸ್ಕೃತ ಜೀವನ ಮತ್ತು ಅಂತಹ ಸಮಾಜ ನಿರ್ಮಾಣ ಕಾರ್ಯದಲ್ಲಿ ಆಧುನಿಕ ಮಾಧ್ಯಮಗಳ ಪಾತ್ರ ಮಹತ್ವಪೂರ್ಣವಾದುದು. ಶ್ರೀ ಹರಿಹರೇಶ್ವರ ಅವರ ಇಂಗಿತದಂತೆ ಮಾಧ್ಯಮಗಳು ಅತ್ಯಂತ ಸಮರ್ಥವಾದ ಪ್ರಾಚೀನ ಸಂವಾದ ತಂತ್ರವನ್ನು ರೂಪಾಂತರಗೊಳಿಸಿ, ತಮ್ಮ ಕಾರ್ಯನೀತಿಯಲ್ಲಿ ಅಳವಡಿಸಿಕೊಂಡರೆ ಸಾಕು. ಸಾಮಾಜಿಕ ಹಾಗೂ ವೈಯಕ್ತಿಕ ಜೀವನಕ್ಕೆ ಪ್ರಸ್ತುತವಾದ ಅಧ್ಯಾತ್ಮ ಯಾವುದು ಎಂದು ಅರ್ಥ ಮಾಡಿಕೊಳ್ಳಬೇಕು. ಅಧ್ಯಾತ್ಮ ಎಂದರೆ ಯಾವುದೋ ಜಟಿಲವಾದ, ಕ್ಲಿಷ್ಟವಾದ, ಅನುಷ್ಠಾನಸಾಧ್ಯವಲ್ಲ ಎಂಬಂತಹ ಶುಷ್ಕ ತತ್ತ್ವ ಅಲ್ಲ. 'ಸರ್ವೇ ಜನಾಃ ಸುಖಿನೋ ಭವಂತು' ಎಂದು ಹಾರೈಸಿ ಪ್ರಾರ್ಥಿಸುವ, ಸಕಲ ಜೀವಾತ್ಮರಿಗೆ ಲೇಸನೇ ಬಯಸುವ, ಸ್ವಾರ್ಥದಲ್ಲಿ ಮುಳುಗದೆ ಎಲ್ಲರ ಸುಖದಲ್ಲಿ ತನ್ನ ಸುಖವನ್ನು ಕಾಣುವ, ಅಲ್ಲಿ ಸಲ್ಲುವ ಮುನ್ನ ಇಲ್ಲಿ ಸಲ್ಲುವ ಹಾಗೆ ಬಾಳಲು ಸತತವಾಗಿ ಯತ್ನಿಸುವ ಮನೋಧರ್ಮ ಮತ್ತು ಅದನ್ನು ಆಚರಣೆಗೆ ತರುವ ದೃಢಚಿತ್ತ – ಇವೇ ಅಧ್ಯಾತ್ಮ. ಇದನ್ನೇ ಸ್ವಾಮಿ ವಿವೇಕಾನಂದರು 'ಅನುಷ್ಠಾನ ವೇದಾಂತ' ಎಂಬ ಹೆಸರಿನಲ್ಲಿ ವಿಶ್ವದೆಲ್ಲೆಡೆ ಪ್ರಚುರಗೊಳಿಸಿದರು. ಇಂದಿನ ಮಾಧ್ಯಮಗಳು ಮಾಡಬೇಕಾದುದು ಇದನ್ನೇ. ಆಗ ವಿಶ್ವವೇ ಕುಟುಂಬವಾಗಿ, ಮಾನವಜನಾಂಗವು ಶ್ರೇಯಸ್ಸು–ಪ್ರೇಯಸ್ಸುಗಳೆರಡನ್ನೂ ಸಮನ್ವಯಗೊಳಿಸಿ ಸಾಧಿಸಿ, ಶಾಂತಿ ಸಾಮರಸ್ಯಗಳಿಂದ ಬಾಳುತ್ತದೆ. ಅದಕ್ಕೆ ಮಾಧ್ಯಮಗಳ ಸಹಕಾರ, ಸಹಭಾಗಿತ್ವ ಅತ್ಯವಶ್ಯ.

## ರಾವಣನ ಉಪದೇಶ

ಶ್ರೀರಾಮನ ಬಾಣಗಳ ಏಟನ್ನು ತಿಂದು ರಾವಣನು ಭೂಮಿಯಲ್ಲಿ ಬಿದ್ದಿದ್ದಾನೆ. ಆಗ ರಾಮ ಲಕ್ಷ್ಮಣನಿಗೆ ಹೇಳಿದ: "ರಾವಣನ ಹತ್ತಿರ ಹೋಗು. ಈ ಅಂತಿಮ ಘಳಿಗೆಯಲ್ಲಿ ಅವನು ಏನಾದರೂ ಉಪದೇಶವನ್ನು ಕೊಡಲು ಇಚ್ಛಿಸುತ್ತಾನೆಯೇ ಎಂದು ಹೋಗಿ ಕೇಳು" ಇದನ್ನು ಕೇಳಿದ ಲಕ್ಷ್ಮಣನು ತಿರಸ್ಕಾರ ಭಾವನೆಯಿಂದ ಹೀಗೆ ಹೇಳಿದ: "ಪಾಪಿಯಾದ ಶತ್ರುವಿನಿಂದ ಏನಾದರೂ ಕಲಿಯಲು ಸಾಧ್ಯವೇ? ಅವನಿಗೆ ತಾನು ಮಾಡಿದ ತಪ್ಪಿಗೆ ಪಶ್ಚಾತ್ತಾಪ ಕೂಡ ಆಗಿಲ್ಲ. ಅಂತಹವನು ನನಗೆ ಏನು ಉಪದೇಶ ಕೊಡಲು ತಾನೇ ಸಾಧ್ಯ?." ಶ್ರೀರಾಮ ಲಕ್ಷ್ಮಣನಿಗೆ ಹೇಳಿದ: "ರಾವಣನು ನಮ್ಮ ಶತ್ರುವಲ್ಲ. ಆದರೆ ಅವನು ಮಾಡಿರುವ ಪಾಪಕೃತ್ಯಗಳನ್ನು ಮಾತ್ರ ನಾವು ವಿರೋಧಿಸುತ್ತೇವೆ. ಈಗ ಅವನು ಸಾಯುವ ಸ್ಥಿತಿಯಲ್ಲಿ ಇದ್ದಾನೆ. ಅವನು ಜನ್ಮತಃ ಬ್ರಾಹ್ಮಣ ಮತ್ತು ಅನುಭವಿ ರಾಜ ಕೂಡ. ಆದುದರಿಂದ ನಾವು ಅವನ ಅನುಭವದಿಂದ ಹೊರಹೊಮ್ಮಿದ ಮಾತುಗಳನ್ನು ಕೇಳಿ ತಿಳಿದುಕೊಳ್ಳಬೇಕು." ತಂದೆಗೆ ಸಮಾನನಾದ ಶ್ರೀರಾಮನ ಆದೇಶವನ್ನು ತಿರಸ್ಕರಿಸಲು ಲಕ್ಷ್ಮಣನಿಗೆ ಸಾಧ್ಯವಾಗಲಿಲ್ಲ. ಅವನು ರಾವಣನ ಸಮೀಪಕ್ಕೆ ಹೋಗಿ ಕೇಳಿದ: "ನಾನು ನಿಮ್ಮ ಹತ್ತಿರ ಶಿಕ್ಷಣ ಪಡೆಯಲು ಬಂದಿದ್ದೇನೆ, ನೀವು ಅದನ್ನು ಪೂರೈಸುವಿರೇನು?" ರಾವಣ ಅದನ್ನು ಕೇಳಲಿಲ್ಲವೆಂಬಂತೆ ಮುಖ ತಿರುಗಿಸಿದ. ಲಕ್ಷ್ಮಣ ರಾಮನ ಹತ್ತಿರ ಬಂದು "ರಾವಣ ಸಾಯುವುದರಲ್ಲಿದ್ದಾನೆ, ಆದರೂ ಈಗಲೂ ಅವನ ಅಹಂಕಾರ ಸ್ವಲ್ಪವೂ ಕಮ್ಮಿಯಾದಂತಿಲ್ಲ. ಅವನಿಗಂತೂ, ಅವನು ಮಾಡಿದ ಕೃತ್ಯಗಳಿಗೆ ಸ್ವಲ್ಪವೂ ಪಶ್ಚಾತ್ತಾಪವಿಲ್ಲ" ಎಂದ.

ಆಗ ಶ್ರೀರಾಮನು ಹೇಳುತ್ತಾನೆ: "ನೀನು ಅವನ ತಲೆಯ ಹತ್ತಿರ ನಿಂತು, ಉಪದೇಶವನ್ನು ಪಡೆಯಲು ಬಯಸಿದೆ. ಇದು ಸರಿಯಲ್ಲ. ಪಾದಗಳ ಬಳಿ ನಿಂತು ನಮ್ರಭಾವದಿಂದ ಉಪದೇಶಕ್ಕಾಗಿ ಪ್ರಾರ್ಥಿಸಬೇಕು. ನೀನು ಪುನಃ ರಾವಣನ ಬಳಿ ಹೋಗಿ ಅವನನ್ನು ಪ್ರಾರ್ಥಿಸಿಕೋ". ಈ ಸಲ ಲಕ್ಷ್ಮಣನು ರಾವಣನ ಚರಣಗಳ ಬಳಿ ನಿಂತು, ತಲೆಬಾಗಿ, ಕೈ ಜೋಡಿಸಿ, ವಿನಮ್ರವಾಗಿ ಕೇಳಿದ : "ಲಂಕೇಶ, ನಾನು ನಿಮ್ಮಂತಹ ಅನುಭವಿ ರಾಜನ ಹತ್ತಿರ ಶಿಕ್ಷಣವನ್ನು ಪಡೆಯಲು ಉತ್ಸುಕನಾಗಿದ್ದೇನೆ. ನೀವು ನನ್ನನ್ನು ಕೃತಾರ್ಥನನ್ನಾಗಿ ಮಾಡುವಿರೆಂದು ಆಶಿಸುತ್ತೇನೆ". ಈ ಮಾತುಗಳನ್ನು ಕೇಳಿ, ರಾವಣನು ನಗುತ್ತಾ ಹೇಳಿದ : "ಲಕ್ಷ್ಮಣ, ನೀನು ನನ್ನನ್ನು ಲಂಕೇಶನೆಂದು ಸಂಬೋಧಿಸಿದ್ದು ಉಚಿತವಲ್ಲ. ನನ್ನ ಸೋದರ ವಿಭೀಷಣನನ್ನು ರಾಮನು ಲಂಕೇಶನನ್ನಾಗಿ ಮಾಡಿದ್ದಾನೆ. ಶಿಕ್ಷಣದ ಮಾತಿರಲಿ, ಸೀತೆಯ ಅಪಹರಣದಂತಹ ಕೆಟ್ಟ ಕೆಲಸದ ಕಾರಣದಿಂದಾಗಿ ನಾನು ಯಾವ ಉಪದೇಶ ಮಾಡಲೂ ಸಹ ಅಸಮರ್ಥನಾಗಿದ್ದೇನೆ. ಇಷ್ಟಾದರೂ ನೀನು ನನ್ನಿಂದ ಏನಾದರೂ ಕಲಿಯಲು ಇಚ್ಛಿಸಿದರೆ ಮೂರು ಸೂತ್ರಗಳನ್ನು ಹೇಳಬಯಸುತ್ತೇನೆ. ಈ ಮೂರು ಮಾತುಗಳನ್ನು ಅಥವಾ ಸೂತ್ರಗಳನ್ನು ಚೆನ್ನಾಗಿ ತಿಳಿದಿಟ್ಟುಕೊ. **ಒಂದು, ಶುಭಕರ್ಮ ಮಾಡುವುದರಲ್ಲಿ ವಿಳಂಬ ಮಾಡಬಾರದು. ಎರಡು, ಯಾವತ್ತೂ ಕ್ರೋಧಕ್ಕೆ ವಶನಾಗಬಾರದು. ಮೂರು–ಯಾವ ಕೆಲಸ ಮಾಡಬೇಕಾದರೂ ಮೊದಲು ಚೆನ್ನಾಗಿ ಆಲೋಚಿಸಿ ಮಾಡಬೇಕು.**" ರಾವಣ ಮಾತು ಮುಂದುವರಿಸಿದ, "ಈ ನಿಯಮಗಳನ್ನು ಪಾಲನೆ ಮಾಡದಿದ್ದುದರಿಂದಲೇ ನನ್ನ ಕಡೆಯಿಂದ ಸೀತೆಯಂತಹ ಪತಿವ್ರತೆಯ ಅಪಹರಣವಾಯಿತು. ಅದಕ್ಕೆ ಈಗ ನನಗೆ ಪಶ್ಚಾತ್ತಾಪವಾಗುತ್ತಿದೆ". ಲಕ್ಷ್ಮಣನು ರಾಮನಿಗೆ ಈ ವೃತ್ತಾಂತವನ್ನು ತಿಳಿಸಿದಾಗ, ಶ್ರೀರಾಮನು ಹೇಳಿದ: "ಎಂದು ಮನುಷ್ಯ ತನ್ನ ತಪ್ಪುಗಳನ್ನು ಶುದ್ಧ ಹೃದಯದಿಂದ ಒಪ್ಪಿಕೊಳ್ಳುತ್ತಾನೆಯೋ ಮತ್ತು ಆ ತಪ್ಪುಗಳನ್ನು ಪುನಃ ಮಾಡುವುದಿಲ್ಲವೆಂದು ನಿಶ್ಚಯಿಸುತ್ತಾನೆಯೋ, ಅದೇ ನಿಜವಾದ ಪ್ರಾಯಶ್ಚಿತ್ತ. ಇದರಿಂದ ಆ ವ್ಯಕ್ತಿಯ ಮನಸ್ಸಿನ ವ್ಯಥೆ ದೂರವಾಗುವುದು."

(ಮೂಲ: ಡಾ.ಶರದ ಚಂದ್ರ ಪೆಂಡಾರಕರ; ಅನುವಾದ: ಸ್ವಾಮಿ ಶಾಂತಿನಾಥಾನಂದ)